ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು
JSS MAHAVIDYAPEETHA, MYSURU

# ಜೆಎಸ್‌ಎಸ್ ವಾರ್ತಾಪತ್ರ

## ಮಾಸಪತ್ರಿಕೆ

# JSS VARTHAPATHRA

*Monthly Magzine*

ಸಂಪುಟ 4 ಸಂಚಿಕೆ 18 ಜೂನ್ 2019



ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವ ದತ್ತಿ ಉಪನ್ಯಾಸ ಹಾಗೂ ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಕಳೆದ ವರ್ಷ ದತ್ತಿ ಉಪನ್ಯಾಸ ನೀಡಿದ ಶ್ರೀ ಎಸ್. ಗುರುಮೂರ್ತಿಯವರ ಭಾರತ್ ಗ್ಲೋಬಲ್ ಆ್ಯಂಬಿಷನ್ಸ್ ಅಂಡ್ ಲೋಕಲ್ ಚಾಲೆಂಜಸ್ ಪುಸ್ತಕವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಕೆ.ಆರ್. ವೇಣುಗೋಪಾಲ್‌ರವರು ಲೋಕಾರ್ಪಣೆ ಮಾಡಿದರು. ಚಿತ್ರದಲ್ಲಿ ಹಾರ್ವರ್ಡ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ಗೀತಾ ಗೋಪಿನಾಥ್, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಜಿ. ಹೇಮಂತ ಕುಮಾರ್‌ರವರು ಇದ್ದಾರೆ




ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಸ್ನಾತಕೋತ್ತರ ವಿಭಾಗಗಳ ವಿದ್ಯಾರ್ಥಿ ವೇದಿಕೆಗಳ ಸಮಾರೋಪ ಸಮಾರಂಭದಲ್ಲಿ ಶ್ರೀ ಎಸ್.ಪಿ. ಷಡಕ್ಷರಿಸ್ವಾಮಿಯವರು ಮಾತನಾಡುತ್ತಿರುವುದು. ಚಿತ್ರದಲ್ಲಿ ಡಾ. ಎಂ.ಪಿ. ಸೋಮಶೇಖರ್, ಪ್ರೊ. ಬಿ.ವಿ. ಸಾಂಬಶಿವಯ್ಯ, ಡಾ. ಲಿಂಗರಾಜ ಗಾಂಧಿ, ಡಾ. ಲಕ್ಷ್ಮಿನಾರಾಯಣ್, ಪ್ರೊ. ಎಂ. ಮಹದೇವಪ್ಪ ಮತ್ತು ಶ್ರೀ ಕಾರ್ತಿಕ್ ರವರು



ಮೈಸೂರಿನ ಹೆಬ್ಬಾಳು ಕೈಗಾರಿಕಾ ವಲಯದಲ್ಲಿರುವ ಜೆಎಸ್ಎಸ್ ಮೈಸೂರು ಅರ್ಬನ್ ಹಾತ್‌ನಲ್ಲಿ ಏರ್ಪಡಿಸಿದ್ದ ಕರಕುಶಲ ವಸ್ತು ಪ್ರದರ್ಶನವನ್ನು ಮೈಸೂರು ಅಪರ ಜಿಲ್ಲಾಧಿಕಾರಿ ಶ್ರೀಮತಿ ಜಿ. ಅನುರಾಧ ಉದ್ಘಾಟಿಸಿದರು. ಚಿತ್ರದಲ್ಲಿ ಶ್ರೀ ಆರ್. ಮಹೇಶ್, ಶ್ರೀ ಕೆ.ಎಸ್. ಸುನೀಲ್ ಕುಮಾರ್, ಶ್ರೀ ಎಸ್. ಪುಟ್ಟಸುಬ್ಬಪ್ಪ, ಡಾ. ಸಿ.ಜಿ. ಬೆಟಸೂರ ಮಠ ಮತ್ತು ಶ್ರೀ ರಾಕೇಶ್ ರೈಯವರು



ಮೈಸೂರಿನ ಜೆಎಸ್ಎಸ್ ವಾಕ್ ಮತ್ತು ಶ್ರವಣ ಸಂಸ್ಥೆಯ ಪದವೀಧರರ ದಿನಾಚರಣೆಯಲ್ಲಿ ಪದವೀಧರರೊಂದಿಗೆ ಡಾ. ಎನ್.ಪಿ. ನಟರಾಜ, ಶ್ರೀ ಆರ್. ಮಹೇಶ್, ಡಾ. ಬಿ. ಸುರೇಶ್, ಡಾ. ಸಿ.ಜಿ. ಬೆಟಸೂರಮಠ, ಡಾ. ಎನ್. ರತ್ನ ಮತ್ತು ಡಾ. ಆರ್. ಸುಮಾರವರು

## ಜಾಗತೀಕರಣದಿಂದ ಬಡತನದ ಪ್ರಮಾಣ ಇಳಿಕೆ

ಡಾ. ಗೀತಾ ಗೋಪಿನಾಥ್

ಜಾಗತೀಕರಣದ ಪ್ರಭಾವದಿಂದಾಗಿ ಭಾರತದಲ್ಲಿ ಬಡತನದ ಪ್ರಮಾಣ ಕಡಿಮೆಯಾಗಿದೆ. ಆದರೆ ಶೇ. 1ರಷ್ಟು ಜನರ ಬಳಿ ಮಾತ್ರ ಸಂಪತ್ತು ಕ್ರೋಡೀಕರಣ ವಾಗುತ್ತಿದೆ ಎಂಬ ಕಾರಣಕ್ಕೆ ವಿರೋಧ ವ್ಯಕ್ತವಾಗಿದೆ ಎಂದು ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆ ಸಂಶೋಧನಾ ವಿಭಾಗದ ಆರ್ಥಿಕ ಸಲಹೆಗಾರರು ಹಾಗೂ ಹಾರ್ವರ್ಡ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ಗೀತಾ ಗೋಪಿನಾಥ್ ಅಭಿಪ್ರಾಯಪಟ್ಟರು.

ಜೆಎಸ್‌ಎಸ್ ಮಹಾವಿದ್ಯಾಪೀಠವು ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಆಯೋಜಿಸಿದ್ದ ಸುವರ್ಣ ಮಹೋತ್ಸವ ದತ್ತಿ ಉಪನ್ಯಾಸ-9 ಮತ್ತು ಕೃತಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಅವರು 'ಜಾಗತೀಕರಣ ಸವಾಲುಗಳು ಮತ್ತು ಸಹಕಾರದ ಅಗತ್ಯ' ಕುರಿತು ಮಾತನಾಡಿದರು.

ಜಾಗತಿಕವಾಗಿ ಭಾರತದ ಬಡತನದ ಪ್ರಮಾಣವು ಕಡಿಮೆಯಾಗಿದೆ. ಬಹುಪಾಲು ಮಂದಿ ಒಂದಲ್ಲ ಒಂದು ಉದ್ಯೋಗವನ್ನು ಅವಲಂಬಿಸಿ ಬಡತನ ರೇಖೆಗಿಂತ ಮೇಲೆ ಬಂದಿದ್ದಾರೆ. ಆದರೆ ಶೇ. 1ರಷ್ಟು ಮಂದಿಯ ಬಳಿ ಈ ದೇಶದ ಸಂಪತ್ತು ಕ್ರೋಡೀಕರಣವಾಗುತ್ತಿದೆ ಎಂಬ ಆರೋಪವಿದೆ. ಜೊತೆಗೆ ಶ್ರೀಮಂತರು ಮತ್ತು ಬಡವರ ನಡುವಿನ ಅಂತರ ಹೆಚ್ಚಾಗಿದೆ. ಅಂತಾರಾಷ್ಟ್ರೀಯ ವ್ಯಾಪಾರ ವ್ಯವಹಾರದಿಂದ ಸಾಕಷ್ಟು ಲಾಭವಿದೆ. ದೇಶದಲ್ಲಿ ಉತ್ಪಾದನೆಯಾಗುವ ವಸ್ತುಗಳನ್ನು ಕೊಟ್ಟು ತೆಗೆದುಕೊಳ್ಳುವುದರಿಂದ ಬಾಂಧವ್ಯ ವೃದ್ಧಿಯಾಗುತ್ತದೆ. ಕೆಲವು ಕಾರಣಗಳಿಂದಾಗಿ ಇತ್ತೀಚಿನ ದಿನಗಳಲ್ಲಿ ಅಂತಾರಾಷ್ಟ್ರೀಯ ವ್ಯಾಪಾರಕ್ಕೆ ಹಿಂದೇಟು ಹಾಕಲಾಗುತ್ತಿದೆ. ಇದಕ್ಕೆ ಸ್ಪಷ್ಟ ಉದಾಹರಣೆ ಅಮೆರಿಕವು ಆಮದಾಗುವ ವಸ್ತುವಿನ ಮೇಲೆ ತೆರಿಗೆ ವಿಧಿಸಿತು. ಆದರೆ ಇದನ್ನು ಚೀನಾ ವಿರೋಧಿಸಿದ್ದಾಗಿ ಅವರು ತಿಳಿಸಿದರು.

ಭಾರತದಲ್ಲಿ ಉತ್ಪಾದನಾ ಪ್ರಮಾಣ ಕಡಿಮೆಯಾಗಿದೆ. ಉದ್ಯೋಗಾವಕಾಶವೂ ಕಡಿಮೆಯಾಗುತ್ತಿದೆ. ಸ್ವದೇಶಿಯ ಉತ್ಪಾದನೆಯ ಪ್ರಯತ್ನ ಹಿಂದೆಯೂ ನಡೆದಿದ್ದು ವಿಫಲವಾಗಿತ್ತು. ಇತ್ತೀಚಿನ ದಿನಗಳಲ್ಲಿ ಉದ್ಯೋಗಾವಕಾಶ ಲಭ್ಯವಿದ್ದರೂ ಭಾರತದಲ್ಲಿ ಶೇ. 15ರಷ್ಟು ಉದ್ಯೋಗಾವಕಾಶವನ್ನು ಯಂತ್ರಗಳು ಅಕ್ರಮಿಸಿಕೊಂಡಿವೆ. ಜಾಗತಿಕ ಮಟ್ಟದಲ್ಲಿ ಈ ಪ್ರಮಾಣ ಶೇ. 9ರಷ್ಟಾಗಬಹುದು ಎಂದು ಅಂದಾಜಿಸಲಾಗಿದೆ ಎಂದು ಅವರು ವಿವರಿಸಿದರು.

ಜಾಗತೀಕರಣವು ಕೃಷಿಯ ಮೇಲೆ ಯಾವುದೇ ಪರಿಣಾಮ ಬೀರಿಲ್ಲ. ಇನ್ನು ರೈತರ ಸಾಲ ಮನ್ನಾ ಮಾಡುವುದರಿಂದ ಕೇವಲ ಸಾಲ ಪಡೆದ ರೈತರಿಗಷ್ಟೇ ಅನುಕೂಲವಾಗುತ್ತದೆ. ಆದ್ದರಿಂದ ಎಲ್ಲಾ ರೈತರ ಖಾತೆಗೆ ಇಂತಿಷ್ಟು ಧನಸಹಾಯ ಮಾಡಬಹುದು. ಇನ್ನು ಸಹಕಾರ ತತ್ವ ಬಹಳ ಅಗತ್ಯವಾಗಿದೆ. ಅದನ್ನು ಹೆಚ್ಚುಹೆಚ್ಚಾಗಿ ಅಳವಡಿಸಿಕೊಳ್ಳಬೇಕು. ನಮ್ಮಲ್ಲಿ ಭ್ರಷ್ಟಾಚಾರ, ವಾತಾವರಣದಲ್ಲಿನ ಬದಲಾವಣೆ ಮುಂತಾದವು ಸವಾಲಾಗಿ ಪರಿಣಮಿಸಿವೆ. ಜಾಗತಿಕ ಆರ್ಥಿಕತೆ ಅಭಿವೃದ್ಧಿಯು ಮುಂದಿನ ಐದು ವರ್ಷಗಳಲ್ಲಿ ಚೀನಾ ಮತ್ತು ಭಾರತವನ್ನು ಅವಲಂಬಿಸಿದೆ ಎಂದು

ಅಂದಾಜಿಸಲಾಗಿದೆ. 2008ರಲ್ಲಿ ಬ್ಯಾಂಕ್‌ಗಳು ಸಂಕಷ್ಟಕ್ಕೆ ಸಿಲುಕಿದಂತೆ ಮುಂದಿನ ದಿನಗಳಲ್ಲಿ ಸಿಲುಕುವುದಿಲ್ಲ ಎಂಬ ನಂಬಿಕೆ ಇದೆ ಎಂದು ಅವರು ಹೇಳಿದರು.

ವಿದ್ಯಾರ್ಥಿಗಳು ಬೇರೆಯವರನ್ನು ಅನುಕರಿಸ ಬಾರದು, ಬದಲಿಗೆ ತಮ್ಮತನವನ್ನು ಅಭಿವ್ಯಕ್ತಿಗೊಳಿಸ ಬೇಕು; ಆಶಾವಾದಿಗಳಾಗಿರಬೇಕು. ಏಕೆಂದರೆ ಜೀವನ ಎಲ್ಲವನ್ನೂ ಕೊಡುವುದಿಲ್ಲ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಶ್ರೀ ಎಸ್. ಗುರುಮೂರ್ತಿ ಅವರ ಭಾರತ್ ಗ್ಲೋಬಲ್ ಆ್ಯಂಬಿಷನ್ಸ್ ಆ್ಯಂಡ್ ಲೋಕಲ್ ಚಾಲೆಂಜಸ್ ಕೃತಿಯನ್ನು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಡಾ. ಕೆ.ಆರ್. ವೇಣುಗೋಪಾಲ್ ಲೋಕಾರ್ಪಣೆಗೊಳಿಸಿದರು.

ಮೈಸೂರು ವಿವಿ ಕುಲಪತಿ ಪ್ರೊ. ಜಿ. ಹೇಮಂತಕುಮಾರ್ ಅಧ್ಯಕ್ಷತೆ ವಹಿಸಿದ್ದರು.



ಅಮೆರಿಕದ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಯ ಸಂಶೋಧನಾ ವಿಭಾಗದ ಮುಖ್ಯ ಆರ್ಥಿಕ ತಜ್ಞರು ಹಾಗೂ ನಿರ್ದೇಶಕರಾದ ಡಾ. ಗೀತಾ ಗೋಪಿನಾಥ್‌ರವರು ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವ ದತ್ತಿ ಉಪನ್ಯಾಸ ನೀಡುತ್ತಿರುವುದು

**ಜೆಎಸ್‌ಎಸ್ ಸಂಸ್ಥೆಗಳಲ್ಲಿ**
**ನಡೆಯುವ ಕಾರ್ಯಕ್ರಮದ ವರದಿಗಳು ಮತ್ತು ಛಾಯಾಚಿತ್ರಗಳನ್ನು**
**ಜೆಎಸ್‌ಎಸ್ ಮಾಸಪತ್ರಿಕೆಯ**
**ಈ ಕೆಳಕಂಡ ಇಮೇಲ್‌ಗೆ ಕಳುಹಿಸುವುದು.**
**email:jssmasapatrike@gmail.com**

## ಸಾಮಾಜಿಕ ಮೌಲ್ಯಗಳೊಂದಿಗೆ ಶಿಕ್ಷಣ ಸಾಗಬೇಕು

**ಶ್ರೀ ಎಸ್.ಪಿ. ಷಡಕ್ಷರಿಸ್ವಾಮಿ**

ದೇಶದ ಸರ್ವತೋಮುಖ ಬೆಳವಣಿಗೆಗೆ ಶಿಕ್ಷಣ ಅಗತ್ಯ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಇಂದು ಮೌಲ್ಯಗಳನ್ನು ಬೆಳೆಸುವ ನಿಟ್ಟಿನಲ್ಲಿ ಶಿಕ್ಷಣದ ಪಾತ್ರವನ್ನು ಕುರಿತು ಚಿಂತಿಸಬೇಕಾಗಿದೆ. ಸಾಮಾಜಿಕ ಮೌಲ್ಯಗಳೊಂದಿಗೆ ಶಿಕ್ಷಣ ಸಾಗಬೇಕು ಎಂದು ಕರ್ನಾಟಕ ಲೋಕಸೇವಾ ಆಯೋಗದ ಹಂಗಾಮಿ ಅಧ್ಯಕ್ಷರಾದ ಶ್ರೀ ಎಸ್.ಪಿ. ಷಡಕ್ಷರಿ ಸ್ವಾಮಿಯವರು ಅಭಿಪ್ರಾಯಪಟ್ಟರು.

ದಿನಾಂಕ 13.4.2019ರಂದು ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ ಸ್ನಾತಕೋತ್ತರ ವಿದ್ಯಾರ್ಥಿ ವೇದಿಕೆಗಳ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು. ವಿದ್ಯಾರ್ಥಿಗಳು ಉನ್ನತ ಶಿಕ್ಷಣವನ್ನು ಪಡೆದಿದ್ದರೂ ಕೂಡ ಸಮಾಜದಿಂದ ವಿಮುಖರಾಗುತ್ತಿದ್ದಾರೆ. ಇದಕ್ಕೆ ಸಾಮಾಜಿಕ ಸಂಪರ್ಕದ ಕೊರತೆಯೇ ಕಾರಣ. ಶಿಕ್ಷಣವು ಬದುಕಿಗೆ ಹತ್ತಿರವಾದಾಗ ಸಾಮಾಜಿಕ ಸಂಪರ್ಕವನ್ನು ಸಾಧಿಸಬಹುದು. ಬದುಕಿನಲ್ಲಿ ಎದುರಾಗುವ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಕೌಶಲ್ಯವನ್ನು ಪಡೆಯಬಹುದು. ಆದ್ದರಿಂದ ಶಿಕ್ಷಣದಲ್ಲಿ ಸಾಮಾಜಿಕ ಮೌಲ್ಯಗಳಿಗೆ ಪ್ರಾಧಾನ್ಯತೆ ಇರಬೇಕು ಎಂದು ತಿಳಿಸಿದರು.

ಸಮಾರೋಪ ಭಾಷಣ ಮಾಡಿದ ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರಾದ ಡಾ. ಲಕ್ಷ್ಮಿ ನಾರಾಯಣರವರು ಭಾರತದಲ್ಲಿ ಉನ್ನತ ಶಿಕ್ಷಣ ಪಡೆಯುವವರ ಸಂಖ್ಯೆ ಕಡಿಮೆಯಿದೆ. ಉನ್ನತ ಶಿಕ್ಷಣ ಕೇವಲ ಉದ್ಯೋಗಕ್ಕೆ ಸೀಮಿತವಾದುದಲ್ಲ. ಅದು ಸಂಶೋಧನಾ ವಲಯವನ್ನು ವಿಸ್ತರಿಸಲು ಪೂರಕ ವಾದುದು. ಆ ದಿಸೆಯಲ್ಲಿ ಉನ್ನತ ವ್ಯಾಸಂಗದ ಅಧ್ಯಯನ ಸಾಗಬೇಕು. ಜೆಎಸ್ಎಸ್ ವಿದ್ಯಾಸಂಸ್ಥೆಯು ಉನ್ನತ ಶಿಕ್ಷಣವನ್ನು ವಿಸ್ತರಿಸುವ ಸಲುವಾಗಿ ಕೈಗಾರಿಕೆಗಳು ಮತ್ತು ಉನ್ನತ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಬೇಕು. ಸ್ನಾತಕೋತ್ತರ ವಿದ್ಯಾರ್ಥಿಗಳು ಮೂಲಭೂತ ಸಂಶೋಧನೆಗೆ ಒತ್ತು ನೀಡಬೇಕು. ನೀವೆಲ್ಲರೂ ವಿಶ್ವಮಾನವರೇ ಆಗಿದ್ದೀರಿ. ಕೆಲವೊಂದು ಸಾಮಾಜಿಕ ಒತ್ತಡಗಳು ಎದುರಾದರೂ ಅವುಗಳನ್ನು ಎದುರಿಸಲು ಧೈರ್ಯದಿಂದ ಮುನ್ನಡೆಯಿರಿ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಡಾ. ಲಿಂಗರಾಜ ಗಾಂಧಿ ಯವರು ಮಾತನಾಡಿ ಕಳೆದ ಹತ್ತು ವರ್ಷಗಳಲ್ಲಿ ಈ ಕಾಲೇಜು ಅಭೂತಪೂರ್ವ ಪ್ರಗತಿಯನ್ನು ಸಾಧಿಸಿದೆ. ಶಿಕ್ಷಣವು ಕೌಶಲ, ಉದ್ಯೋಗ, ತಂತ್ರಜ್ಞಾನ ಇತ್ಯಾದಿ ವಿಷಯಗಳಿಗೆ ಒತ್ತು ನೀಡಬೇಕೆಂದು ಹೇಳಲಾಗುತ್ತಿದೆ. ಆದರೆ ಮೌಲ್ಯಗಳನ್ನು ಒಳಗೊಂಡಿರುವುದು ಮಾತ್ರವೇ ನಿಜವಾದ ಶಿಕ್ಷಣ. ಮಾಹಿತಿ ನೀಡುವುದು, ಪಡೆಯುವುದು ಮಾತ್ರ ಶಿಕ್ಷಣವಲ್ಲ. ಆರೋಗ್ಯವಂತ ಮತ್ತು ಮೌಲ್ಯಾಧಾರಿತ ಸಮಾಜವನ್ನು ರೂಪಿಸುವುದೇ ಶಿಕ್ಷಣದ ಮುಖ್ಯ ಧ್ಯೇಯ ಎಂದು ಹೇಳಿದರು.

ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯ, ಪ್ರಾಂಶುಪಾಲರಾದ ಪ್ರೊ. ಎಂ. ಮಹದೇವಪ್ಪ, ಸಾಂಸ್ಕೃತಿಕ ವೇದಿಕೆಯ ಸಂಚಾಲಕ ಡಾ. ಎಂ.ಪಿ. ಸೋಮಶೇಖರ್, ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಎಂ. ಕಾರ್ತಿಕ್ ಉಪಸ್ಥಿತರಿದ್ದರು. ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು.

ವಿದ್ಯಾರ್ಥಿ ಶ್ರೀ ಕಾರ್ತಿಕ್ ಸ್ವಾಗತಿಸಿದರು. ವಿದ್ಯಾರ್ಥಿನಿ ಕು. ಜ್ಯೋತಿ ಎನ್. ಭಟ್ ಪ್ರಾರ್ಥನೆ ಮಾಡಿದರು. ಶ್ರೀ ಚಂದನ್ ವಂದಿಸಿದರು. ಕು. ಎಚ್.ಯು. ಸೌಜನ್ಯ ಕಾರ್ಯಕ್ರಮವನ್ನು ನಿರೂಪಿಸಿದರು.

# ಕೈ ನೈರ್ಮಲ್ಯ ದಿನಾಚರಣೆ

ವಿಶ್ವ ಶುಚಿತ್ವ ದಿನಾಚರಣೆ ಪ್ರಯುಕ್ತ ಜೆಎಸ್‌ಎಸ್ ಆಸ್ಪತ್ರೆ ಹಾಗೂ ಸೋಂಕು ನಿಯಂತ್ರಣ ಉತ್ಪನ್ನಗಳ ತಯಾರಿಕಾ ಸಂಸ್ಥೆ ಶುಲ್ಕೆ ಇಂಡಿಯಾ ಪ್ರೈವೆಟ್ ಲಿಮಿಟೆಡ್ ಸಹಯೋಗದಲ್ಲಿ ಮೈಸೂರು ನಗರದ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ದಿನಾಂಕ 15.5.2019ರಂದು 'ಆಸ್ಪತ್ರೆಗಳು ಮತ್ತು ಆರೋಗ್ಯ ಸಂರಕ್ಷಣಾ ವ್ಯವಸ್ಥೆಯಲ್ಲಿ ಕೈ ನೈರ್ಮಲ್ಯದ ಪ್ರಾಮುಖ್ಯತೆ' ಕುರಿತು ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಬೆಳಗ್ಗೆಯಿಂದ ಸಂಜೆಯವರೆಗೆ ಆಸ್ಪತ್ರೆಯ ಎಲ್ಲಾ ವಿಭಾಗಗಳ ಸಿಬ್ಬಂದಿಗಳಿಗೆ ಹಾಗೂ ಆಸ್ಪತ್ರೆಗೆ ಬರುವ ಹೊರ ರೋಗಿಗಳಿಗೂ ಕೈ ಶುಚಿತ್ವದ ಮಹತ್ವ ಹಾಗೂ ಅರಿವು ಮೂಡಿಸಲಾಯಿತು.

ವಿವಿಧ ಸೋಂಕುಗಳು, ಕೀಟಾಣುಗಳು ಮೊದಲು ದೇಹ ಪ್ರವೇಶಿಸುವುದು ಕೈಗಳ ಮೂಲಕ. ಅಲ್ಲದೆ ನಮ್ಮ ದೈನಂದಿನ ಕೆಲಸಗಳಲ್ಲಿ ಕೈಗಳ ಬಳಕೆ ಹೆಚ್ಚಿರುವುದರಿಂದ ಇವುಗಳ ಮೂಲಕ ಹೆಚ್ಚು ಕೀಟಾಣುಗಳು ಮನುಷ್ಯನ ದೇಹ ಪ್ರವೇಶಿಸುತ್ತವೆ. ಆದ್ದರಿಂದಲೇ ಕೈಗಳ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಕೈಗಳನ್ನು ಕೇವಲ ನೀರಿನಿಂದ ಮಾತ್ರವಲ್ಲ, ಸೋಪು ಹಾಕಿ ಸ್ವಚ್ಛವಾಗಿ ಮತ್ತು ವೈಜ್ಞಾನಿಕವಾಗಿ ಹೇಗೆ ತೊಳೆಯಬಹುದು ಎಂಬುದನ್ನು ತಿಳಿಸಿಕೊಡಲಾಯಿತು.

ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್, ಜೆಎಸ್‌ಎಸ್ ಕಾಲೇಜ್ ಆಫ್ ನರ್ಸಿಂಗ್ ವಿದ್ಯಾರ್ಥಿಗಳು ಮತ್ತು ಆಸ್ಪತ್ರೆ ಸಿಬ್ಬಂದಿಗಳು ನರ್ಸಿಂಗ್ ವೃತ್ತಿ ಜೀವನದಲ್ಲಿ ಆರೋಗ್ಯ ಸಂಬಂಧಿತ ಸೋಂಕುಗಳ ಬಗ್ಗೆ ಪೋಸ್ಟರ್ ಪ್ರದರ್ಶಿಸಿ ಸಾರ್ವಜನಿಕರಿಗೆ ಮಾಹಿತಿ ನೀಡಿದರು.

ಜೆಎಸ್‌ಎಸ್ ಆಸ್ಪತ್ರೆಯ ನಿರ್ದೇಶಕರಾದ ಡಾ. ಕರ್ನಲ್ ಎಂ. ದಯಾನಂದರವರು ಕಾರ್ಯಕ್ರಮ ಉದ್ಘಾಟಿಸಿ ರೋಗ ನಿಯಂತ್ರಣಕ್ಕೆ ಕೈಗಳು ಶುದ್ಧವಾಗಿರಬೇಕು. ಪ್ರತಿನಿತ್ಯ ಹಲವು ಬಾರಿ ಶುದ್ಧವಾಗಿ ಕೈತೊಳೆಯುವುದರಿಂದ ರೋಗವನ್ನು ನಿಯಂತ್ರಣಕ್ಕೆ ತರಬಹುದು. ಆದ್ದರಿಂದ ಪ್ರತಿಯೊಬ್ಬರೂ ತಮ್ಮ ಆರೋಗ್ಯ ಚೆನ್ನಾಗಿರಬೇಕಾದರೆ ಕಡ್ಡಾಯವಾಗಿ ಸ್ವಚ್ಛವಾಗಿ ಕೈತೊಳೆಯಬೇಕು ಎಂದು ಸಲಹೆ ನೀಡಿದರು.

ಶುಲ್ಕೆ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ಉಪಾಧ್ಯಕ್ಷ ರೋಹಿತ್ ಬಾಟಿಯಾ ರೋಗ ಬಂದ ನಂತರ ಚಿಕಿತ್ಸೆ ಪಡೆಯುವ ಮುನ್ನವೇ ಮುಂಜಾಗ್ರತಾ ಕ್ರಮ ಅನುಸರಿಸಬೇಕು. ಕೈಯಿಂದ ಹರಡುವ ರೋಗಗಳು ಹಾಗೂ ಕೈ ತೊಳೆಯದೆ ಇರುವುದು ಜಾಗತಿಕ ಸಮಸ್ಯೆಯಾಗಿದೆ. ಈ ನಿಟ್ಟಿನಲ್ಲಿ ಈ ತರಹದ ಅರಿವು ಕಾರ್ಯಕ್ರಮಗಳು ಸಾಕಷ್ಟು ನಡೆಯಬೇಕು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಕೈ ಶುಚಿತ್ವಕ್ಕೆ ಒತ್ತು ಕೊಟ್ಟಿದ್ದ ನರ್ಸಿಂಗ್ ಮತ್ತು ಹೌಸ್ ಕೀಪಿಂಗ್ ವಿಭಾಗಕ್ಕೆ ಪ್ರಶಸ್ತಿ ನೀಡಲಾಯಿತು. ಅಂತೆಯೇ ವೈಯಕ್ತಿಕವಾಗಿಯೂ ಪ್ರಶಸ್ತಿ ನೀಡಲಾಯಿತು. ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಪ್ರಾಂಶುಪಾಲರಾದ ಡಾ. ಎಚ್. ಬಸವನಗೌಡಪ್ಪ, ಜೆಎಸ್‌ಎಸ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ. ಎಂ. ಗುರುಸ್ವಾಮಿ, ಆಸ್ಪತ್ರೆಯ ಸೋಂಕು ನಿಯಂತ್ರಣ ಸಮಿತಿ ಅಧ್ಯಕ್ಷರಾದ ಡಾ. ಎಂ.ಡಿ. ರವಿ, ಮೈಕ್ರೋಬಯಾಲಜಿ ವಿಭಾಗದ ಮುಖ್ಯಸ್ಥರಾದ ಡಾ. ಸುಮನ, ನರ್ಸಿಂಗ್ ಸೇವೆಗಳ ಮುಖ್ಯಸ್ಥರಾದ ಮತಿಜಾನೆಟ್ ಮಥಿಯಾಸ್, ಮುಖ್ಯ ಆಡಳಿತಾಧಿಕಾರಿಗಳಾದ ಶ್ರೀ ಬಸವರಾಜ್ ಕುಪ್ಪಸ್ತ, ಹಣಕಾಸು ಅಧಿಕಾರಿಗಳಾದ ಶ್ರೀ ಭಗವಾನ್ ಉಪಸ್ಥಿತರಿದ್ದರು.

## ಕರಕುಶಲ ವಸ್ತುಪ್ರದರ್ಶನ ಮತ್ತು ಮಾರಾಟ ಮೇಳ

ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಕೇಂದ್ರದ ಜವಳಿ ಮಂತ್ರಾಲಯದ ಸಹಯೋಗದಲ್ಲಿ ರಾಷ್ಟ್ರೀಯ ಮತ್ತು ರಾಜ್ಯ ಪ್ರಶಸ್ತಿ ಪಡೆದ ಕುಶಲಕರ್ಮಿಗಳಿಂದ ಕರಕುಶಲ ವಸ್ತುಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಹಮ್ಮಿಕೊಳ್ಳಲಾಗಿತ್ತು.

ಮೈಸೂರು ನಗರದ ಹೆಬ್ಬಾಳು ಕೈಗಾರಿಕಾ ವಲಯದಲ್ಲಿರುವ ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್‌ನಲ್ಲಿ ಕರಕುಶಲ ವಸ್ತು ಪ್ರದರ್ಶನಕ್ಕೆ ಮೈಸೂರು ಅಪರ ಜಿಲ್ಲಾಧಿಕಾರಿಗಳಾದ ಶ್ರೀಮತಿ ಜಿ. ಅನುರಾಧರವರು ಚಾಲನೆ ನೀಡಿದರು.

ಇದು 104ನೇ ವಸ್ತುಪ್ರದರ್ಶನವಾಗಿದ್ದು 50ಕ್ಕೂ ಹೆಚ್ಚಿನ ಮಳಿಗೆಗಳನ್ನು ತೆರೆಯಲಾಗಿತ್ತು. ಕರ್ನಾಟಕ, ಜಮ್ಮು ಮತ್ತು ಕಾಶ್ಮೀರ, ಪಶ್ಚಿಮ ಬಂಗಾಳ, ಮಹಾರಾಷ್ಟ್ರ, ಉತ್ತರಪ್ರದೇಶ, ದೆಹಲಿ, ಗುಜರಾತ್, ಒರಿಸ್ಸಾ, ಆಂಧ್ರಪ್ರದೇಶ, ತಮಿಳುನಾಡು, ಬಿಹಾರ, ಛತ್ತೀಸ್‌ಘಡ, ಮಧ್ಯಪ್ರದೇಶ ಮೊದಲಾದ ರಾಜ್ಯಗಳಿಂದ ಆಗಮಿಸಿದ್ದ ಪ್ರದರ್ಶಕರು ವಸ್ತುಗಳನ್ನು ಪ್ರದರ್ಶಿಸಿದರು.

ಮೇಳದಲ್ಲಿ ಜಮ್ಮುಕಾಶ್ಮೀರದ ಮೃದು ಶಾಲು, ಎಂಬ್ರಾಯಿಡರಿ ಡ್ರೆಸ್‌ಗಳು ಮತ್ತು ಆಭರಣಗಳು; ಒರಿಸ್ಸಾದ ದೊಗ್ರಾ ಶಿಲ್ಪ, ಪಟ್ಟ ಚಿತ್ರಕಲೆಗಳು; ಮಹಾರಾಷ್ಟ್ರದ ಟಿಸ್ಸರ್ ರೇಷ್ಮೆ ಸೀರೆಗಳು ಮತ್ತು ಕೊಲ್ಲಾಪುರ್ ಚಪ್ಪಲಿಗಳು; ಗುಜರಾತ್‌ನ ಬಣ್ಣದ ಹೂ ಕುಂಡಗಳು, ಕುಚ್ ವುಲ್ಲನ್ ಶಾಲು ಮತ್ತು ಪ್ಯಾಚ್‌ವರ್ಕ್; ಪಶ್ಚಿಮ ಬಂಗಾಳದ ಸೆಣಬಿನ ವಸ್ತುಗಳು, ಬ್ಯಾಟಿಕ್ ಸೀರೆಗಳು, ಜದೋಷಿ ಸೀರೆಗಳು; ಈಶಾನ್ಯ ರಾಜ್ಯಗಳ ಬಿದಿರಿನ ಗೃಹೋಪಯೋಗಿ ವಸ್ತುಗಳು ಮತ್ತು ಕೃತಕ ಹೂವುಗಳು, ವರ್ಣಚಿತ್ರಗಳು; ಮಧ್ಯಪ್ರದೇಶದ ಚಂದೇರಿ ರೇಷ್ಮೆ ಸೀರೆಗಳು, ಚರ್ಮದಿಂದ ತಯಾರಿಸಿದ ವಿವಿಧ ವಿನ್ಯಾಸದ ಪ್ರಾಣಿಗಳು; ಚನ್ನಪಟ್ಟಣದ ಗೊಂಬೆಗಳು, ಮಣ್ಣಿನಿಂದ ತಯಾರಿಸಿದ ಹೂಜಿಗಳು, ಇನ್ನು ಮುಂತಾದ ಕರಕುಶಲ ವಸ್ತುಗಳು ಪ್ರದರ್ಶನ ಗೊಂಡವು. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರ ಮಠ, ಜೆಎಸ್‌ಎಸ್ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಮಹೇಶ್, ಕರಕುಶಲ ಸೇವಾ ಕೇಂದ್ರದ ಸಹಾಯಕ ನಿರ್ದೇಶಕರಾದ ಶ್ರೀ ಕೆ.ಎಸ್. ಸುನೀಲ್‌ಕುಮಾರ್, ಹಣಕಾಸು ವಿಭಾಗದ ನಿರ್ದೇಶಕರಾದ ಶ್ರೀ ಎಸ್. ಪುಟ್ಟಸುಬ್ಬಪ್ಪ, ಯೋಜನಾ ನಿರ್ದೇಶಕರಾದ ಶ್ರೀ ರಾಕೇಶ್ ರೈ ಮುಂತಾದವರು ಉಪಸ್ಥಿತರಿದ್ದರು.

ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ಗೌತಮಮುನಿಗೆ ಗೋವೇಧೆಯಾಯಿತ್ತು.
ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ಬಲಿಗೆ ಬಂಧನವಾಯಿತ್ತು.
ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ಕರ್ಣನ ಕವಚ ಹೋಯಿತ್ತು.
ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ದಕ್ಷಂಗೆ ಕುರಿದಲೆಯಾಯಿತ್ತು.
ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ಪರಶುರಾಮ ಸಮುದ್ರಕ್ಕೆ ಗುಜಿಯಾದ.
ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ನಾಗಾರ್ಜುನನ ತಲೆ ಹೋಯಿತ್ತು.
ದೇವಾ, ಭಕ್ತನೆಂದು ನಂಬಿದ ಕಾರಣ
ನಮ್ಮ ಕೂಡಲಸಂಗನ ಶರಣರು ಕೈಲಾಸವಾಸಿಗಳಾದರು

- ಬಸವಣ್ಣ

## ಶುಶ್ರೂಷಕರ ಸೇವೆಯಿಂದ ಗುಣಮಟ್ಟದ ಆಸ್ಪತ್ರೆ ನಿರ್ಮಾಣ ಸಾಧ್ಯ

**ಪ್ರೊ. ಎನ್. ಲಕ್ಷ್ಮೀದೇವಿ**

ಶುಶ್ರೂಷಕರ ಉತ್ತಮ ಸೇವೆಯಿಂದ ಗುಣಮಟ್ಟದ ಆಸ್ಪತ್ರೆ ಹೊರ ಹೊಮ್ಮುತ್ತದೆ ಎಂದು ಬೆಂಗಳೂರಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಪ್ರೊ. ಎನ್. ಲಕ್ಷ್ಮೀದೇವಿ ಹೇಳಿದರು.

ಜೆಎಸ್‌ಎಸ್ ಆಸ್ಪತ್ರೆಯ ರಾಜೇಂದ್ರ ಶತಮಾನೋತ್ಸವ ಭವನದಲ್ಲಿ ಜೆಎಸ್‌ಎಸ್ ಆಸ್ಪತ್ರೆ, ಜೆಎಸ್‌ಎಸ್ ಕಾಲೇಜ್ ಆಫ್ ನರ್ಸಿಂಗ್ ಮತ್ತು ಜೆಎಸ್‌ಎಸ್ ಶುಶ್ರೂಷ ಶಾಲೆ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ವಿಶ್ವ ಶುಶ್ರೂಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇಂದು ಉತ್ತಮ ಆರೋಗ್ಯವನ್ನು ನೀಡಬೇಕಾದರೆ ಶುಶ್ರೂಷಕರ ಸೇವೆ ಅಪಾರವಾದುದು. ರೋಗಿಗಳು ಗುಣಮುಖರಾಗಲು ಇವರ ಸೇವೆ ಗಮನಾರ್ಹವಾದುದು. ಶುಶ್ರೂಷಕರು ಸಾಮಾಜಿಕ ಜವಾಬ್ದಾರಿಯೊಂದಿಗೆ ಕೆಲಸ ನಿರ್ವಹಿಸಬೇಕಿದೆ ಎಂದು ಹೇಳಿದರು.

ಇದಕ್ಕೂ ಮುನ್ನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಬೆಂಗಳೂರು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ. ಕೆ.ಇ. ಲಿಂಗೇಗೌಡರವರು ಶುಶ್ರೂಷಕರ ಸೇವೆ ಅತ್ಯಂತ ಉತ್ತಮವಾದುದು. ಅವರು ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಆರೋಗ್ಯಕರ ಸಮಾಜ ನಿರ್ಮಿಸಲು ಸಹಕಾರಿಯಾಗಿದ್ದಾರೆ ಎಂದು ಹೇಳಿದರು.

ಜೆಎಸ್‌ಎಸ್ ಆಸ್ಪತ್ರೆಯ ನಿರ್ದೇಶಕರಾದ ಡಾ. ಎಂ. ದಯಾನಂದ, ಶ್ರೀ ಆರ್. ಮಹೇಶ್, ಶ್ರೀ ಜಿನೆಟ್ ಮಥಾಯಿಸ್, ಪ್ರೊ. ಶೀಲಾ ವಿಲಿಯವ್ಸ್, ಡಾ. ಗುರುಸ್ವಾಮಿ, ಶ್ರೀ ಶಶಿಧರ್, ಶ್ರೀ ಶಾಂತಮಲ್ಲಪ್ಪ, ಶ್ರೀ ಸುರೇಶ್ ಬಾಬು, ಶ್ರೀ ವೃತ್ಯುಂಜಯ ಮತ್ತು ಶುಶ್ರೂಷಕರು, ಸಂಶೋಧಕರು ಭಾಗವಹಿಸಿದ್ದರು. □

---

## ಜೆಎಸ್‌ಎಸ್ ವಿಜ್ಞಾನ ತಂತ್ರಜ್ಞಾನ ವಿಶ್ವವಿದ್ಯಾಲಯ-ಟಿಸಿಎಸ್ ಸಂಸ್ಥೆಯೊಂದಿಗೆ ಒಡಂಬಡಿಕೆ

ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯವು ಟಿಸಿಎಸ್ ಸಂಸ್ಥೆಯೊಂದಿಗೆ ಕಂಪ್ಯೂಟರ್ ಸೈನ್ಸ್ ಮತ್ತು ಬಿಸಿನೆಸ್ ಸಿಸ್ಟಮ್ ಪದವಿ ಕಾರ್ಯಕ್ರಮ ಸಂಬಂಧ ಒಡಂಬಡಿಕೆ ಮಾಡಿಕೊಂಡಿದೆ. ಜೆಎಸ್‌ಎಸ್ ವಿಜ್ಞಾನ ತಂತ್ರಜ್ಞಾನ ವಿವಿ ಕುಲಪತಿಗಳಾದ ಡಾ. ಬಿ.ಜಿ. ಸಂಗಮೇಶ್ವರ ಮತ್ತು ಟಿಸಿಎಸ್ ಸಂಸ್ಥೆಯ ಶೈಕ್ಷಣಿಕ ಮುಖ್ಯಸ್ಥರಾದ ಶ್ರೀ ಚಂದ್ರ ಕೊಡೂರು ಅವರು ಈ ಒಡಂಬಡಿಕೆಗೆ ಪರಸ್ಪರ ಸಹಿ ಹಾಕಿದರು.

ಡಿಜಿಟಲ್ ಟೆಕ್ನಾಲಜಿಯಲ್ಲಿ ಇಂಜಿನಿಯರುಗಳ ಪ್ರತಿಭೆ ಮತ್ತು ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ಟಿಸಿಎಸ್ ಸಂಸ್ಥೆಯು ಭಾರತದ ಮುಂದುವರಿದ ಶೈಕ್ಷಣಿಕ ಸಂಸ್ಥೆಗಳ ಜೊತೆಗೂಡಿ ನಾಲ್ಕುವರ್ಷದ ಕಂಪ್ಯೂಟರ್ ಸೈನ್ಸ್ ಮತ್ತು ಬಿಸಿನೆಸ್ ಸಿಸ್ಟಮ್ ಪದವಿ ಕಾರ್ಯಕ್ರಮದ ಪಠ್ಯಕ್ರಮವನ್ನು ಸಿದ್ಧಪಡಿಸಿದೆ.

ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿ ಕರ್ನಾಟಕದಲ್ಲಿಯೇ ಮೊದಲ ಬಾರಿಗೆ ಈ ಕೋರ್ಸನ್ನು

ಪರಿಚಯಿಸುತ್ತಿದೆ. ಈ ಪಠ್ಯಕ್ರಮದ ಮುಖ್ಯ ಉದ್ದೇಶವೆಂದರೆ ಪದವಿ ಪಡೆದ ವಿದ್ಯಾರ್ಥಿಗಳು ಕಂಪ್ಯೂಟರ್ ಸೈನ್ಸ್‌ನ ಮೂಲ ವಿಷಯಗಳಲ್ಲದೇ ಅದರ ಜೊತೆಗೆ ಮೌಲ್ಯ ಶಿಕ್ಷಣ ನೀಡುವುದಾಗಿದೆ. ಜೊತೆಗೆ ವಿದ್ಯಾರ್ಥಿಗಳಲ್ಲಿ ಪ್ರಸ್ತುತ ಚಲಾವಣೆಯಲ್ಲಿರುವ ವಿಷಯಗಳಾದ ಅನಲಿಟಿಕ್ಸ್, ಮಿಷನ್ ಲರ್ನಿಂಗ್, ಕ್ಲೌಡ್ ಕಂಪ್ಯೂಟಿಂಗ್ ಇಂಟರ್‌ನೆಟ್ ಆಫ್ ಥಿಂಗ್ಸ್, ಆರ್ಟಿಫಿಸಿಯಲ್ ಇಂಟೆಲಿಜೆನ್ಸ್ ಮುಂತಾದವುಗಳ ಬಗ್ಗೆ ಅರಿವು ಮೂಡಿಸುವುದರ ಮೂಲಕ ನಾಲ್ಕು ವರ್ಷದ ಅಧ್ಯಯನ ಮುಗಿಯುವಷ್ಟರಲ್ಲೇ ಅವರಿಗೆ ಕೈಗಾರಿಕೆ ಉದ್ಯಮದಲ್ಲಿ ಕೆಲಸ ನಿರ್ವಹಿಸಲು ಸಮರ್ಥರನ್ನಾಗಿ ಮಾಡಬಲ್ಲದು.

ಈ ಪಠ್ಯಕ್ರಮವು ಎಕ್ಸಿಕ್ಯುಟಿವ್ ಕಮಿಟಿ ಆಫ್ ಎಐಸಿಟಿಇಯಿಂದ ಮಾನ್ಯತೆ ಪಡೆದಿದೆ. ಟಿಸಿಎಸ್ ಈ ಕೋರ್ಸ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಇಂಟರ್ನ್‌ಶಿಪ್ ಅವಕಾಶಗಳನ್ನು ನೀಡಿ, ಅವರನ್ನು ಪ್ರಾಜೆಕ್ಟ್‌ಗಳಲ್ಲಿ ಮತ್ತು ನೈಜ ವ್ಯಾಪಾರೀಕರಣದ ಸವಾಲುಗಳನ್ನು ಎದುರಿಸಲು ಸಿದ್ಧಗೊಳಿಸುತ್ತಿದೆ. ಟಿಸಿಎಸ್ ಸಂಸ್ಥೆಯ ಶ್ರೀ ರಂಜನ್ ಬಂದೋಪಾಧ್ಯಾಯ, ಶ್ರೀ ಬಿ.ಜಿ. ಮಹೇಶ್ವರನ್, ಶ್ರೀ ಶ್ರೀನಿವಾಸ ರಾಮಾನುಜಂ ರವರು ಉಪಸ್ಥಿತರಿದ್ದರು.

---

## ವಿದ್ಯಾರ್ಥಿಗಳಿಗೆ ಪ್ರಜಾತಾಂತ್ರಿಕ ವ್ಯವಸ್ಥೆಗಳ ಅರಿವು ಅಗತ್ಯ

**ಶ್ರೀ ಅಡಗೂರು ಎಚ್. ವಿಶ್ವನಾಥ್**

ಮೈಸೂರಿನ ಊಟಿ ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ 28.4.2019ರಂದು ಏರ್ಪಡಿಸಲಾಗಿದ್ದ ಕಾಲೇಜಿನ ಹಿರಿಯ ವಿದ್ಯಾರ್ಥಿಗಳ ಹಾಗೂ ಪೋಷಕರ ಸಮಾವೇಶವನ್ನು ಮಾಜಿ ಸಚಿವರು ಮತ್ತು ಶಾಸಕರಾದ ಶ್ರೀ ಅಡಗೂರು ಎಚ್. ವಿಶ್ವನಾಥ್‌ರವರು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಈ ಕಾಲೇಜಿನಲ್ಲಿ ಹಿರಿಯ ವಿದ್ಯಾರ್ಥಿಯಾಗಿದ್ದ ದಿನಗಳನ್ನು ಮೆಲುಕು ಹಾಕುತ್ತಾ ಅಂದು ನೂರು ವಿದ್ಯಾರ್ಥಿಗಳೊಂದಿಗೆ ಆರಂಭಗೊಂಡ ಕಾಲೇಜಿನಲ್ಲಿ ಈಗ 3100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪದವಿ, ಸ್ನಾತಕೋತ್ತರ ಪದವಿ, ವೃತ್ತಿಪರ ಕೋರ್ಸ್‌ಗಳು, ಸಂಶೋಧನಾ ವಿಭಾಗಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಸ್ವಾಯತ್ತ ಕಾಲೇಜಾಗಿ, ರಾಷ್ಟ್ರಮಟ್ಟದ ನ್ಯಾಕ್ ಮಾನ್ಯತೆಯಲ್ಲಿ ಎ ಗ್ರೇಡ್‌ನೊಂದಿಗೆ ಹಲವು ಉನ್ನತ ಗೌರವಗಳನ್ನು ಪಡೆದ ಕಾಲೇಜಿನ ಇಂದಿನ ಬೆಳವಣಿಗೆಯ ಬಗ್ಗೆ ಹೆಮ್ಮೆ ಪಡುವಂತಾಗಿದೆ. ಈ ಕಾಲೇಜಿನಲ್ಲಿ ಮೊದಲಿನಿಂದಲೂ ನಾಡಿನ ಸಂಸ್ಕೃತಿ, ಸಾಹಿತ್ಯ, ಕಲೆ, ಕ್ರೀಡೆ ಮೊದಲಾದ ಪಠ್ಯೇತರ ಚಟುವಟಿಕೆಗಳಿಗೆ ಆದ್ಯತೆ ನೀಡುವುದರ ಮೂಲಕ ವಿದ್ಯಾರ್ಥಿಗಳಲ್ಲಿ ಉತ್ತಮ ನಾಯಕತ್ವದ ಗುಣಗಳನ್ನು ಬೆಳೆಸುವ ವಾತಾವರಣವಿದೆ. ಇದಕ್ಕೆ ನಾನೇ ಸಾಕ್ಷಿ. ಬಿಎಸ್ಸಿ ವಿದ್ಯಾರ್ಥಿಯಾಗಿದ್ದ ನಾನು ಕಾಲೇಜಿನ ಸಾಂಸ್ಕೃತಿಕ ಹಾಗೂ ಸಾಹಿತ್ಯಕ್ಕೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ಸದಾ ಮುಂದಿರುತ್ತಿದ್ದೆ. ಅಂತರ ಕಾಲೇಜು ಚಟುವಟಿಕೆಗಳಲ್ಲಿ ಬಹುತೇಕ ಬಹುಮಾನಗಳು ನಮ್ಮ ಕಾಲೇಜಿಗೆ ಬರುತ್ತಿದ್ದವು. ವಿದ್ಯಾರ್ಥಿ ಸಂಘದ ಚುನಾವಣೆಗಳಿಂದಾಗಿ ಪ್ರಜಾತಾಂತ್ರಿಕ ವ್ಯವಸ್ಥೆಯ ಮತ್ತು ಅದರ ಆಡಳಿತ ನಿರ್ವಹಣೆ ಕ್ರಮಗಳ ಬಗ್ಗೆ ಅರಿವು ಮೂಡಿಸಿಕೊಳ್ಳಲು ಸಾಧ್ಯವಾಯಿತು, ವಿದ್ಯಾರ್ಥಿಯಾಗಿ ದ್ದಾಗಲೇ ನನ್ನಲ್ಲಿ ನಾಯಕತ್ವದ ಗುಣಗಳು ಬೆಳೆದವು. ಇವು ಕ್ರಮೇಣ

ಜನಸೇವೆಗೆ ಅವಕಾಶವಾಗುವ ರಾಜಕಾರಣದಂತಹ ಕ್ಷೇತ್ರದಲ್ಲಿಯೂ ಯಶಸ್ಸು ದೊರೆತು ಮಂತ್ರಿಯಾಗುವಂತೆ ಮಾಡಿದವು. ಆದರೆ ಇಂದು ನಮ್ಮಲ್ಲಿನ ಬಹುತೇಕ ವಿದ್ಯಾರ್ಥಿಗಳಿಗೆ ನಾವು ಯಾವ ವ್ಯವಸ್ಥೆಯಲ್ಲಿ ಇದ್ದೇವೆ ಎಂಬುದೇ ತಿಳಿದಿರುವುದಿಲ್ಲ. ಹಾಗಾಗಿ ನಮ್ಮ ಪ್ರಜಾತಾಂತ್ರಿಕ ವ್ಯವಸ್ಥೆಗಳ ಬಗ್ಗೆ ಅವರಿಗೆ ಗೊತ್ತು ಮಾಡಿಕೊಡಬೇಕಾದ ಅಗತ್ಯವಿದೆ ಎಂದು ತಿಳಿಸಿದರು.

ಕಾಲೇಜಿನ ಮುಖ್ಯಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಕಾಲೇಜಿನ ಪ್ರಗತಿ ಕುರಿತಂತೆ ಪರಿಚಯಿಸಿದರು. ಕಾಲೇಜಿನ ಹಿರಿಯ ವಿದ್ಯಾರ್ಥಿಗಳು ಮತ್ತು ಪೋಷಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಪ್ರಾಂಶುಪಾಲರಾದ ಪ್ರೊ. ಎಂ. ಮಹದೇವಪ್ಪ ಸ್ವಾಗತಿಸಿದರು. ಸಹಾಯಕ ಪ್ರಾಧ್ಯಾಪಕರಾದ ಡಾ. ಎನ್. ರಾಜೇಂದ್ರ ಪ್ರಸಾದ್ ವಂದನಾರ್ಪಣೆ ಮಾಡಿದರು. ಕು. ವಿದ್ಯಾಶ್ರೀ ಪ್ರಾರ್ಥಿಸಿದರು. ಪ್ರಾಧ್ಯಾಪಕರಾದ ಪ್ರೊ. ಡಿ.ಎಸ್. ಸದಾಶಿವಮೂರ್ತಿ ಕಾರ್ಯಕ್ರಮ ನಿರೂಪಿಸಿದರು. ಸಮಾರಂಭದಲ್ಲಿ ಕಾಲೇಜಿನ ಅಧ್ಯಾಪಕರು, ಹಿರಿಯ ವಿದ್ಯಾರ್ಥಿಗಳು, ಹಾಲಿ ವಿದ್ಯಾರ್ಥಿಗಳ ಪೋಷಕರು ಉಪಸ್ಥಿತರಿದ್ದರು.

---

## ರೈತರ ಸಮಸ್ಯೆಗಳಿಗೆ ರೈತ ಸಂಘಟನೆ ಮತ್ತು ನಾಯಕತ್ವದ ಕೊರತೆಯೇ ಕಾರಣ

**ಶ್ರೀ ಅಂಶಿ ಪ್ರಸನ್ನಕುಮಾರ್**

ರೈತ ಚಳುವಳಿಗಳು ಇಂದು ನಡೆಯುದಿರುವುದೇ ರೈತರ ಸಮಸ್ಯೆಗಳಿಗೆ ಕಾರಣವಾಗಿದೆ. ಒಂದು ಉತ್ತಮವಾದ ರೈತ ಸಂಘಟನೆ, ನಾಯಕತ್ವ ಹಿಂದೆಂದಿಗಿಂತಲೂ ಇಂದು ಅಗತ್ಯವಿದೆ ಎಂದು ಸಾಹಿತಿಗಳೂ ಕನ್ನಡಪ್ರಭ ದಿನಪತ್ರಿಕೆಯ ಸ್ಥಾನಿಕ ಸಂಪಾದಕರೂ ಆದ ಶ್ರೀ ಅಂಶಿ ಪ್ರಸನ್ನಕುಮಾರ್‌ರವರು ಹೇಳಿದರು.

ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಕನ್ನಡ ಸ್ನಾತಕೋತ್ತರ ವಿಭಾಗದಲ್ಲಿ ನಡೆದ ಶ್ರೀ ಅಂಶಿ ಪ್ರಸನ್ನಕುಮಾರ್ ಅವರ 'ಅನ್ನದಾತರ ಆತ್ಮಕಥೆ' ವಿದ್ಯಾರ್ಥಿ ಕೇಂದ್ರಿತ ವಿಚಾರಗೋಷ್ಠಿಯಲ್ಲಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡುತ್ತಿದ್ದರು. ರೈತರು ಕಷ್ಟಪಟ್ಟು ದುಡಿಯಲೇಬೇಕು. ಆಕರ್ಷಕ ನಗರ ಜೀವನದಿಂದ ಕೃಷಿ ಬದುಕು ಉತ್ತಮಗೊಳ್ಳುವುದಿಲ್ಲ. ಸರ್ಕಾರಿ ಯೋಜನೆಗಳನ್ನು ಸಮರ್ಪಕವಾಗಿ ಬಳಸಿಕೊಂಡು ಕೃಷಿಯನ್ನು ಕೈಗೊಳ್ಳಬೇಕು. ಸಾಂಪ್ರದಾಯಿಕ ವ್ಯವಸಾಯದ ಜೊತೆಗೆ ವೈಜ್ಞಾನಿಕ, ಸಾವಯವ, ನೈಸರ್ಗಿಕ ಕೃಷಿ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು. ಇಂದು ರೈತರ ಆತ್ಮಹತ್ಯೆ ಪ್ರಕರಣಗಳು ಹೆಚ್ಚಾಗಿವೆ. ಅವರಿಗೆ ಸ್ಫೂರ್ತಿ ತುಂಬುವ ಕೆಲಸವಾಗಬೇಕು. ಅವರ ಬದುಕನ್ನು ಸುಧಾರಿಸಬೇಕು. ಈ ದಿಸೆಯಲ್ಲಿ ಮಾಧ್ಯಮಗಳ ಪಾತ್ರವೂ ಮುಖ್ಯವಾದುದು. ಓರ್ವ ಪತ್ರಕರ್ತನಾಗಿ ನಾನು ರೈತರ ಬಗೆಗೆ ಕಾಳಜಿ ಹೊಂದಿ ಈ ಕೃತಿಯನ್ನು ಬರೆದಿದ್ದೇನೆ. ರೈತನು ಗೆಲ್ಲಬೇಕು, ಬದುಕಬೇಕು. ದೇಶದ ಎರಡು ಪ್ರಮುಖ ಶಕ್ತಿಗಳಾದ ಸೈನಿಕ ಮತ್ತು ರೈತ ಎಂದಿಗೂ ನೋವನ್ನು ಅನುಭವಿಸಬಾರದು ಎಂಬುದೇ ನನ್ನ ಮತ್ತು ನನ್ನ ಕೃತಿಯ ಆಶಯ ಎಂದು ಹೇಳಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ, ಅಧ್ಯಕ್ಷತೆ ವಹಿಸಿದ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ನಾವು ನೀವೆಲ್ಲಾ ಅನ್ನದಾತರ ಬಗೆಗೆ ಪ್ರತಿದಿನ ಪತ್ರಿಕೆಗಳಲ್ಲಿ ಹಲವು ವಿಚಾರಗಳನ್ನು ಓದುತ್ತಿದ್ದೇವೆ. ಆದರಲ್ಲಿ ರೈತರ ಆತ್ಮಹತ್ಯೆ ಬಗೆಗಿನ ಸುದ್ದಿಗಳೇ ಹೆಚ್ಚಿರುತ್ತವೆ. ಒಂದೆಡೆ ಸಾಲ, ಮತ್ತೊಂದೆಡೆ ಮಳೆಯ ಅಭಾವ ಈ ಕಾರಣದಿಂದ ರೈತನ ಬದುಕು ಸಂಕಷ್ಟಕ್ಕೆ ಸಿಲುಕಿದೆ ಎಂಬುದು ವಾಸ್ತವ. ಆದರೂ ರೈತನಿಗೆ ಸಂಬಂಧಿಸಿದಂತೆ ನಾವು ಶಾಶ್ವತವಾದ ಪರಿಹಾರ ಕಂಡುಕೊಳ್ಳಲು ಆಗಿಲ್ಲ. ರೈತನನ್ನೂ ಒಳಗೊಂಡಂತೆ ಸರ್ಕಾರ, ಸರ್ಕಾರೇತರ ಸಂಸ್ಥೆಗಳು, ಬುದ್ಧಿಜೀವಿಗಳು, ಚಿಂತಕರು ಆಲೋಚಿಸಬೇಕಾದ ಆಗತ್ಯತೆ ಇದೆ. ಆತ್ಮಹತ್ಯೆಗೆ ಸಾವಿರ ಕಾರಣಗಳಿರಬಹುದು, ಆದರೆ ಅನ್ನ ನೀಡುವ ರೈತ ಆತ್ಮಹತ್ಯೆ ಮಾಡಿಕೊಳ್ಳಬಾರದು. ಅವರಿಗೆ ಬದುಕನ್ನು ನೀಡುವ, ಸ್ಫೂರ್ತಿ ತುಂಬುವ ಕೆಲಸ ಆಗಬೇಕು. ಆ ದಿಸೆಯಲ್ಲಿ ಅಂಶಿ ಪ್ರಸನ್ನಕುಮಾರ್ ಅವರ ಅನ್ನದಾತರ ಆತ್ಮಕಥೆಯ ರಚನೆ ಒಂದು ಮುಖ್ಯವಾದ ಕೆಲಸ. ಈ ಕೃತಿಯಲ್ಲಿ ರೈತರ ಗೆಲುವಿದೆ, ರೈತರ ಬಗೆಗಿನ ಕಾಳಜಿಯಿದೆ. ಆದ್ದರಿಂದ ಇದರ ಚಿಂತನೆಯನ್ನು ರೈತರಿಗೆ ತಲುಪಿಸುವ ಕೆಲಸವಾಗಬೇಕು. ವಿದ್ಯಾವಂತರು, ಸಾಹಿತ್ಯಾಸಕ್ತರು ಓದಿ ಚರ್ಚಿಸಬೇಕು ಎಂದು ಹೇಳಿದರು.

ವಿದ್ಯಾರ್ಥಿಗಳಾದ ಕು. ಆರ್.ಎಸ್. ರಂಜಿತಾ ಮತ್ತು ಶ್ರೀ ವಿ. ಕಿರಣ್ ಕೃತಿ ಕುರಿತು ಪ್ರಬಂಧ ಮಂಡಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಂ. ಮಹದೇವಪ್ಪ ವೇದಿಕೆಯಲ್ಲಿ ಉಪಸ್ಥಿತರಿದ್ದರು. ವಿಭಾಗದ ಮುಖ್ಯಸ್ಥರಾದ ಡಾ. ಬಿ.ಎಸ್. ಸುದೀಪ್ ಪ್ರಾಸ್ತಾವಿಕ ಮಾತುಗಳನ್ನಾಡಿ ಸ್ವಾಗತ ಕೋರಿದರು. ಕು. ಜ್ಯೋತಿ ಎನ್. ಭಟ್ ಪ್ರಾರ್ಥಿಸಿದರು. ಶ್ರೀ ಮಾದೇಗೌಡ ವಂದಿಸಿದರು. ಕು. ನಂದಿನಿ ನಿರೂಪಿಸಿದರು. ಅಧ್ಯಾಪಕರು, ವಿದ್ಯಾರ್ಥಿಗಳು ಸಂವಾದದಲ್ಲಿ ಪಾಲ್ಗೊಂಡರು. □




ಮೈಸೂರಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ವಿದ್ಯಾರ್ಥಿಕೇಂದ್ರಿತ ವಿಚಾರಸಂಕಿರಣವನ್ನು ಪ್ರೊ. ಬಿ.ವಿ. ಸಾಂಬಶಿವಯ್ಯನವರು ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಕು. ಆರ್.ಎಸ್. ರಂಜಿತಾ, ಪ್ರೊ. ಎಂ. ಮಹದೇವಪ್ಪ ಶ್ರೀ ಅಂಶಿ ಪ್ರಸನ್ನಕುಮಾರ್, ಡಾ. ಬಿ.ಎಸ್. ಸುದೀಪ್ ಮತ್ತು ಶ್ರೀ ವಿ. ಕಿರಣ್

## ಬೆಳ್ಳಿ ಬೆಡಗು : 25 ವರ್ಷದ ಸಂಭ್ರಮ

### ಜೆಎಸ್‌ಎಸ್ ಪ್ರೌಢಶಾಲೆ, ಶ್ರೀ ಶಿವರಾತ್ರೀಶ್ವರ ನಗರ, ಮೈಸೂರು

ಮೈಸೂರಿನ ಶ್ರೀ ಶಿವರಾತ್ರೀಶ್ವರ ನಗರದಲ್ಲಿರುವ ಬನ್ನಿಮಂಟಪದ ಜೆಎಸ್‌ಎಸ್ ಪ್ರೌಢಶಾಲೆಯು ಕಾಯಕ ತಪಸ್ವಿಗಳೂ ತ್ರಿವಿಧ ದಾಸೋಹಿಗಳೂ ಆದ ರಾಜಗುರುತಿಲಕ ಪರಮಪೂಜ್ಯ ಲಿಂಗೈಕ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಕೃಪಾಶೀರ್ವಾದದೊಂದಿಗೆ ಜೆಎಸ್‌ಎಸ್ ಮಹಾವಿದ್ಯಾಪೀಠದ ಆಶ್ರಯದಡಿ 1992ರಲ್ಲಿ ಸ್ಥಾಪನೆಗೊಂಡು ಸಮಾಜಕ್ಕೆ ಅರ್ಪಣೆಗೊಂಡಿತು.




8ನೇ ತರಗತಿಯ 17 ವಿದ್ಯಾರ್ಥಿಗಳ ದಾಖಲಾತಿಯೊಂದಿಗೆ ಪ್ರಾರಂಭಗೊಂಡ ಶಾಲೆಯಲ್ಲಿ 1994-95ರಲ್ಲಿ 10ನೇ ತರಗತಿಯ ವಾರ್ಷಿಕ ಫಲಿತಾಂಶವು 30.44%ರಷ್ಟಿತ್ತು. ನಂತರದ ಶೈಕ್ಷಣಿಕ ವರ್ಷಗಳಲ್ಲಿ ಫಲಿತಾಂಶವು ಗಣನೀಯವಾಗಿ ಬೆಳವಣಿಗೆಯಾಗುತ್ತಾ ಬಂದಿದೆ. 2012-13, 2013-14, 2014-15ರ ಶೈಕ್ಷಣಿಕ ವರ್ಷಗಳಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ. 100ರಷ್ಟು ಫಲಿತಾಂಶವನ್ನು ಪಡೆದ ಶಾಲೆಯು ಸಾಧನೆಯ ಗಿರಿಶೃಂಗವನ್ನು ತಲುಪಿ ಸಂಸ್ಥೆಗೆ ಕೀರ್ತಿ ತಂದು ಅತ್ಯುತ್ತಮ ಶಾಲೆಯಾಗಿ ಹೊರ ಹೊಮ್ಮಿದೆ.

ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ (2018-19) 8ನೇ ತರಗತಿಯಲ್ಲಿ 38, 9ನೇ ತರಗತಿಯಲ್ಲಿ 49 ಹಾಗೂ 10ನೇ ತರಗತಿಯಲ್ಲಿ 42 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ಶಾಲೆಯಲ್ಲಿ ವ್ಯಾಸಂಗ ಮಾಡಿರುವ ಅನೇಕ ವಿದ್ಯಾರ್ಥಿಗಳು ಜಿಲ್ಲೆ, ರಾಜ್ಯ, ದೇಶ ಹಾಗೂ ವಿದೇಶಗಳಲ್ಲಿ ಸಮಾಜದ ಅನೇಕ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ವಿಶೇಷವಾಗಿ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಶಾಲೆ ಹಾಗೂ ಹಿರಿಯ ವಿದ್ಯಾರ್ಥಿಗಳ ಸಂಬಂಧವನ್ನು ಆತ್ಮೀಯಗೊಳಿಸುವ ಹಾಗೂ ಆ ಮೂಲಕ ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಉದ್ದೇಶದಿಂದ ಶಾಲೆಯಲ್ಲಿ 'ಹಿರಿಯ ವಿದ್ಯಾರ್ಥಿಗಳ ಸಂಘ' ವನ್ನು ಅಸ್ತಿತ್ವಕ್ಕೆ ತರಲಾಗಿದೆ.

ವಿದ್ಯಾರ್ಥಿಗಳ ಸಾಹಿತ್ಯ ಪ್ರತಿಭೆಯನ್ನು ಪ್ರೋತ್ಸಾಹಿಸುವ ಹಾಗೂ ಶಾಲೆಯ ವಿಶೇಷ ಕಾರ್ಯಚಟುವಟಿಕೆಗಳನ್ನು ಬಿಂಬಿಸುವ ನಿಟ್ಟಿನಲ್ಲಿ ವಿದ್ಯಾರ್ಥಿಗಳ ಕೈಬರಹದ ವಿಶೇಷ ವಾರ್ಷಿಕ ಸಂಚಿಕೆ 'ಹೊಂಗಿರಣ' ವನ್ನು ಪ್ರತಿವರ್ಷವೂ ಹೊರತರಲಾಗುತ್ತಿದೆ. ಜೆಎಸ್‌ಎಸ್ ಮಹಾವಿದ್ಯಾಪೀಠವು ಜೆಎಸ್‌ಎಸ್ ಶಾಲೆಗಳ ಅತ್ಯುತ್ತಮ ವಾರ್ಷಿಕ ಸಂಚಿಕೆಗಳಿಗೆ ನೀಡುವ ಬಹುಮಾನವನ್ನು ಶಾಲಾ ವಾರ್ಷಿಕ ಸಂಚಿಕೆಯಾದ 'ಹೊಂಗಿರಣ' ಸತತ 9ವರ್ಷಗಳಿಂದಲೂ ಪಡೆದುಕೊಳ್ಳುತ್ತಿದೆ.

2014-15ನೇ ಶೈಕ್ಷಣಿಕ ಸಾಲಿನಲ್ಲಿ 'ವಿದ್ಯಾರ್ಥಿ ಸಹಕಾರ ಸಂಘ'ವನ್ನು ಶಾಲೆಯಲ್ಲಿ ಸ್ಥಾಪಿಸಲಾಗಿದೆ. ಆ ಮೂಲಕ ವಿದ್ಯಾರ್ಥಿಗಳಲ್ಲಿ ವ್ಯವಹಾರ ಜ್ಞಾನ, ಸಹಕಾರ, ಪ್ರಾಮಾಣಿಕತೆ ಮೊದಲಾದ ಮೌಲ್ಯಗಳನ್ನು ಬೆಳೆಸಲಾಗುತ್ತಿದೆ. ವಿದ್ಯಾರ್ಥಿಗಳೇ ಗ್ರಾಹಕರು ಹಾಗೂ ಮಾಲೀಕರಾಗಿದ್ದಾರೆ. ಪ್ರಜಾಪ್ರಭುತ್ವದ ಮೌಲ್ಯಗಳ ಬಗ್ಗೆ ಅರಿವನ್ನುಂಟು ಮಾಡಲಾಗುತ್ತಿದೆ. ವಿದ್ಯಾರ್ಥಿಗಳೇ ಸ್ವತಃ ಹಣವನ್ನು ಡಬ್ಬದೊಳಗೆ ಹಾಕಿ ತಮಗೆ ಅಗತ್ಯವಿರುವ ಪೆನ್ನು, ಪೆನ್ಸಿಲ್, ಪೇಪರ್ ಮುಂತಾದ ಸಾಮಗ್ರಿಗಳನ್ನು ಪಡೆದುಕೊಳ್ಳುತ್ತಿದ್ದಾರೆ. 'ಪ್ರಾಮಾಣಿಕ ಅಂಗಡಿ'ಯ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಪ್ರಾಮಾಣಿಕತೆಯ ಅರಿವನ್ನು ವಿದ್ಯಾರ್ಥಿಗಳು ಬೆಳೆಸಿಕೊಂಡು ಸಾಬೀತುಪಡಿಸುತ್ತಿದ್ದಾರೆ.

25ವರ್ಷಗಳನ್ನು ಪೂರೈಸಿರುವ ಶಾಲೆಯು ಇಂದಿನ ಪರಮಪೂಜ್ಯ ಜಗದ್ಗುರುಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಮಾರ್ಗದರ್ಶನ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ಬೆಳಕಿನ ದಾರಿಯಲ್ಲಿ ಕಾಯಾ ವಾಚಾ ಮನಸಾ ಕಾಯಕದೊಳು ತಲ್ಲೀನರಾಗಿಹ ಪ್ರತಿಭಾನ್ವಿತ ಶಿಕ್ಷಕರು ಸಿಬ್ಬಂದಿವರ್ಗದವರಿಂದ ಕೂಡಿ ಅಭಿವೃದ್ಧಿ ಪಥದೊಳು ಸಾಗುತ್ತಿದೆ.

---

## ಜೆಎಸ್‌ಎಸ್ ಪ್ರೌಢಶಾಲೆ, ದೊಡ್ಡಕಾಡನೂರು, ಹೊಳೆನರಸೀಪುರ ತಾಲ್ಲೂಕು

ಹೊಳೆನರಸೀಪುರ ತಾಲ್ಲೂಕಿನ ದೊಡ್ಡಕಾಡನೂರಿನ ಜೆಎಸ್‌ಎಸ್ ಪ್ರೌಢಶಾಲೆಯು ದಿನಾಂಕ 27.6.1970ರಂದು ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಆಶೀರ್ವಾದಗಳೊಂದಿಗೆ ಪ್ರಾರಂಭವಾಗಿದೆ. ಅಂದು ಈ ಭಾಗದ ಬಡವಿದ್ಯಾರ್ಥಿಗಳ ಪರಿಸ್ಥಿತಿಯನ್ನು ಗಮನಿಸಿ ದೊಡ್ಡಕಾಡನೂರು ಮತ್ತು ಸುತ್ತಲಿನ ಗ್ರಾಮಗಳ ಶ್ರೀಮಠದ ಭಕ್ತರ ಕೋರಿಕೆಯ ಮೇರೆಗೆ ಒಂದು ಸಣ್ಣ ಬಾಡಿಗೆ ಕಟ್ಟಡದಲ್ಲಿ ಕೇವಲ 23 ವಿದ್ಯಾರ್ಥಿಗಳ ಪ್ರವೇಶದೊಂದಿಗೆ ಶಾಲೆ ಪ್ರಾರಂಭವಾಯಿತು. ಇಂದು ಸುಮಾರು 180 ವಿದ್ಯಾರ್ಥಿಗಳು ಉತ್ತಮ ಶೈಕ್ಷಣಿಕ ವಾತಾವರಣದಲ್ಲಿ ನುರಿತ ಶಿಕ್ಷಕರ ಮಾರ್ಗದರ್ಶನದಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ.

ಶಾಲೆಯು ಪ್ರಾರಂಭವಾದ ಬಗೆಯನ್ನು ಹಿರಿಯರು ಹೀಗೆ ನೆನಪಿಸಿಕೊಳ್ಳುತ್ತಾರೆ: ಒಂದು ದಿನ ದೊಡ್ಡಕಾಡನೂರಿನ ಮಾರ್ಗವಾಗಿ ಪರಮಪೂಜ್ಯ ಜಗದ್ಗುರುಗಳು ಪಯಣಿಸುತ್ತಿರುವಾಗ ದೊಡ್ಡಕಾಡನೂರಿನಲ್ಲಿ ಪೂಜ್ಯರ ಕಾರು ಕೆಟ್ಟು ನಿಂತಿತು. ಅದನ್ನು ತಿಳಿದ ಊರಿನ ಪ್ರಮುಖರು ಗುರುಗಳ ದರ್ಶನ ಪಡೆದು ನಮ್ಮೂರಿಗೆ ಒಂದು ಪ್ರೌಢಶಾಲೆ ಬೇಕು ಎಂದು ವಿನಂತಿಸಿಕೊಂಡರು. ಅದಕ್ಕೆ ಪೂಜ್ಯರು ಮತ್ತೊಂದು ದಿನ ಶ್ರೀಮಠಕ್ಕೆ ಬಂದು ಕಾಣಿರಿ ಎಂದು ಹೇಳಿದರು. ಅಷ್ಟರಲ್ಲಿ ಭಕ್ತರು ಕಾರನ್ನು ರಿಪೇರಿ ಮಾಡಿಸಿ ಮುಂದಿನ ಪಯಣಕ್ಕೆ ಅನುವು ಮಾಡಿಕೊಟ್ಟರು. ಅವರ ಸೂಚನೆಯಂತೆ, ಮುಂದೊಂದು ದಿನ ಶ್ರೀಮಠಕ್ಕೆ ಊರಿನ ಪ್ರಮುಖರು ಭೇಟಿ ನೀಡಿ ಗುರುಗಳ ದರ್ಶನ ಪಡೆದು ಮತ್ತೆ ವಿನಂತಿಸಿಕೊಂಡಾಗ ಅವರು ಶಾಲೆ ಪ್ರಾರಂಭಿಸಲು ಒಪ್ಪಿಗೆ ಸೂಚಿಸಿದರು. ಹೀಗೆ ದೊಡ್ಡಕಾಡನೂರಿನಲ್ಲಿ ಶಾಲೆ ಪ್ರಾರಂಭವಾಯಿತೆಂದು




ಊರಿನ ಅನೇಕ ಭಕ್ತರು  ಇಂದಿಗೂ ಸ್ಮರಿಸುತ್ತಾರೆ.

ಅತಿ ಹಿಂದುಳಿದ ಜನರನ್ನು ಹೊಂದಿರುವ ಈ ಭಾಗದ ಬಡವಿದ್ಯಾರ್ಥಿಗಳಿಗೆ ಶ್ರೀಗಳ ಆಶೀರ್ವಾದದಿಂದ ಉತ್ತಮ ಶಿಕ್ಷಣ ದೊರೆಯುತ್ತಿದೆ. ಆ ಮೂಲಕ ಶೈಕ್ಷಣಿಕವಾಗಿ ಈ ಪ್ರದೇಶ ಮುಂದುವರಿಯಲು ಸಹಾಯಕವಾಗಿದೆ ಎಂದು ಸ್ಥಳೀಯ ಜನರು ಬಹಳ ಸಂತಸ ವ್ಯಕ್ತಪಡಿಸುತ್ತಾರೆ.

ಅಂದು ಪ್ರಾರಂಭವಾದ ಈ ಶಾಲೆಯಲ್ಲಿ ಸಾವಿರಾರು ವಿದ್ಯಾರ್ಥಿಗಳು ತಮ್ಮ ಜೀವನವನ್ನು ಉತ್ತಮವಾಗಿ ರೂಪಿಸಿಕೊಂಡಿದ್ದು, ನಾಡಿನ ವಿವಿಧ ಇಲಾಖೆಗಳಲ್ಲಿ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಕೆಲವರನ್ನು ಇಲ್ಲಿ ಉದಾಹರಿಸಬಹುದು

| | |
|---|---|
| ಶ್ರೀ ನಟೇಶ್ ಡಿ. ಬಿ. | ಕೆ ಎ ಎಸ್ |
| ಶ್ರೀ ಬಿ.ಟಿ ಬನ್ನೇಗೌಡ | ವಾಣಿಜ್ಯ ತೆರಿಗೆ ಇಲಾಖೆ |
| ಶ್ರೀ ಹೊಂಬಾಳೆ ಗೌಡ | ಭಾರತೀಯ ಆಹಾರ ನಿಗಮ |
| ಶ್ರೀ ಶೇಷಾದ್ರಿ | ವಿಪ್ರೋ ಕಂಪನಿ |
| ಶ್ರೀ ಸಂಪತ್ | ಇನ್ಫೋಸಿಸ್ |
| ಶ್ರೀ ಯೋಗೇಶ್ | ಪ್ರಾಂಶುಪಾಲರು |
| ಶ್ರೀ ಧನಂಜಯ | ಕೆ ಇ ಎಸ್ |
| ಶ್ರೀ ಶಿವಕುಮಾರ್ | ಶಿಕ್ಷಕರು (ರಾಜ್ಯ ಪ್ರಶಸ್ತಿ ಪುರಸ್ಕೃತರು) |

ಉತ್ತಮ ಶೈಕ್ಷಣಿಕ ವಾತಾವರಣ, ನುರಿತ ಶಿಕ್ಷಕ ವರ್ಗ, ಉತ್ತಮ ಶಾಲಾ ಕೊಠಡಿಗಳು, ಪ್ರಯೋಗಾಲಯ, ವಿಶಾಲವಾದ ಆಟದ ಮೈದಾನ, ಸುಸಜ್ಜಿತ ಗ್ರಂಥಾಲಯ, ಗಣಕಯಂತ್ರ ಕೊಠಡಿ, ಭವ್ಯ ಸಭಾಂಗಣ ಹೀಗೆ ಹತ್ತು ಹಲವಾರು ಅನುಕೂಲತೆಗಳನ್ನು ಹೊಂದಿರುವ ಈ ಶಾಲೆಯು ಗ್ರಾಮೀಣ ಬಡವಿದ್ಯಾರ್ಥಿಗಳಿಗೆ ಆಶಾಕಿರಣವಾಗಿದೆ.

## ಜಗದ್ಗುರು ಶ್ರೀ ಶಿವರಾತ್ರೀಶ್ವರ ಕೈಗಾರಿಕಾ ತರಬೇತಿ ಸಂಸ್ಥೆ, ತಾಂಡ್ಯ, ನಂಜನಗೂಡು ತಾಲ್ಲೂಕು

ನಂಜನಗೂಡು ತಾಲ್ಲೂಕಿನ ತಾಂಡ್ಯದಲ್ಲಿರುವ ಜಗದ್ಗುರು ಶ್ರೀ ಶಿವರಾತ್ರೀಶ್ವರ ಕೈಗಾರಿಕಾ ತರಬೇತಿ ಸಂಸ್ಥೆಯು 1981ರಲ್ಲಿ ನಂಜನಗೂಡಿನ ರಾಷ್ಟ್ರಪತಿ ರಸ್ತೆಯಲ್ಲಿರುವ ಸರಸ್ವತಿ ರೈಸ್‌ಮಿಲ್ ಆವರಣದಲ್ಲಿ ಎಂಟು ಕೊಠಡಿಗಳೊಂದಿಗೆ ಬಾಡಿಗೆ ಕಟ್ಟಡದಲ್ಲಿ ಪ್ರಾರಂಭಿಸಲಾಯಿತು. ಮೊದಲಿಗೆ ಫಿಟ್ಟರ್ ಹಾಗೂ ಎಲೆಕ್ಟ್ರೀಷಿಯನ್




ವೃತ್ತಿಪರ ಕೋರ್ಸ್‌ಗಳು ಆರಂಭವಾದವು. ನಂತರ 1987-88ನೇ ಸಾಲಿನಲ್ಲಿ ಮೈಸೂರು-ಊಟಿ ರಸ್ತೆಯಲ್ಲಿರುವ ಸಂಸ್ಥೆಯ ಜಾಗದಲ್ಲಿ ಸ್ವಂತ ಕಟ್ಟಡಕ್ಕೆ ಸ್ಥಳಾಂತರಿಸಲಾಯಿತು.

ಫಿಟ್ಟರ್ ಹಾಗೂ ಎಲೆಕ್ಟ್ರಿಷಿಯನ್ ವೃತ್ತಿಪರಕೋರ್ಸ್‌ಗಳು 1997ರಿಂದ ಅನ್ವಯವಾಗುವಂತೆ ವೇತಾನಾನುದಾನಕ್ಕೆ ಒಳಪಟ್ಟವು. 1997ರಿಂದ ಎಲೆಕ್ಟ್ರಾನಿಕ್, ಮೆಕ್ಯಾನಿಕ್ ಕೋರ್ಸನ್ನು ಪ್ರಾರಂಭಿಸಲಾಯಿತು. 2003ನೇ ಸಾಲಿನಿಂದ ಎಸ್‌ಸಿವಿಟಿ ಅಡಿಯಲ್ಲಿ ಟೆಕ್ನಿಷಿಯನ್ ಇನ್ ವಾಟರ್ ಟೆಕ್ನಾಲಜಿ ಅಂಡ್ ಹೆಲ್ತ್ ಸೈನ್ಸ್ ಕೋರ್ಸ್ ಪ್ರಾರಂಭಿಸಲಾಯಿತು. 2010-11ನೇ ಸಾಲಿನಲ್ಲಿ ಎಲೆಕ್ಟ್ರಾನಿಕ್ ಮೆಕ್ಯಾನಿಕ್ ಕೋರ್ಸ್ ವೇತನಾನುದಾನಕ್ಕೆ ಒಳಪಟ್ಟಿತು.

ನಂಜನಗೂಡಿನ ತಾಂಡ್ಯ ಕೈಗಾರಿಕಾ ಪ್ರದೇಶದಲ್ಲಿ ಐದು ಎಕರೆ ಜಾಗವನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಇವರಿಂದ ಪಡೆದು ಕರ್ನಾಟಕ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯವರ ಸಹಾಯಾನುದಾನದಲ್ಲಿ ಐದು ಕೋಟಿಗೂ ಅಧಿಕ ವೆಚ್ಚದಲ್ಲಿ ಕಟ್ಟಡವನ್ನು ಮೀಸಲಾಗಿದೆ.

ಸಂಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಕೈಗಾರಿಕಾ ತರಬೇತಿ ನೀಡುವುದರ ಜೊತೆಗೆ ಸರ್ಕಾರದ ವಿವಿಧ ಇಲಾಖೆಗಳ ಸಹಕಾರದೊಂದಿಗೆ ವಿದ್ಯಾವಂತ ನಿರುದ್ಯೋಗಿಗಳಿಗೆ ಅಲ್ಪಾವಧಿ ತರಬೇತಿ ಕಾರ್ಯಕ್ರಮಗಳನ್ನು ಸಹ ನಡೆಸಲಾಗುತ್ತಿದೆ.

ಸಂಸ್ಥೆಯ ಗಾರ್ಮೆಂಟ್ಸ್‌ನಲ್ಲಿ ಸುಮಾರು 40ಕ್ಕೂ ಹೆಚ್ಚು ವಿದ್ಯುತ್ ಚಾಲಿತ ಹೊಲಿಗೆ ಯಂತ್ರಗಳಿದ್ದು ಸಂಸ್ಥೆಯ ಅಕ್ಕಪಕ್ಕದಲ್ಲಿರುವ ಹಾಗೂ ಮೈಸೂರು ಜಿಲ್ಲೆಯಲ್ಲಿರುವ ಕೆಲವು ನಮ್ಮ ಅಂಗಸಂಸ್ಥೆಗಳ ವಿದ್ಯಾರ್ಥಿ, ವಿದ್ಯಾರ್ಥಿನಿಯರುಗಳಿಗೆ ಸಮವಸ್ತ್ರಗಳನ್ನು ಹಾಗೂ ಬೆಂಗಳೂರಿನ ಜೆಎಸ್ಎಸ್ ಎಟಿಇ ಸಂಸ್ಥೆಗೆ ಎಪ್ರಾನ್‌ಗಳನ್ನು ಪ್ರತಿ ವರ್ಷ ಸರಬರಾಜು ಮಾಡಲಾಗುತ್ತಿದೆ.

ಈಗ ಸಂಸ್ಥೆಯಲ್ಲಿ ಫಿಟ್ಟರ್, ಎಲೆಕ್ಟ್ರಿಷಿಯನ್ ಹಾಗೂ ಎಲೆಕ್ಟ್ರಾನಿಕ್ ಮೈಕ್ಯಾನಿಕ್ ಈ ಮೂರು ವೃತ್ತಿಪರಕೋರ್ಸ್‌ಗಳನ್ನು ನಡೆಸಲಾಗುತ್ತಿದ್ದು ಹಾಲಿ 188 ಮಂದಿ ವೃತ್ತಿ ತರಬೇತಿ ಪಡೆಯುತ್ತಿದ್ದಾರೆ.

## ಸಿಬಿಎಸ್‌ಇ 10ನೇ ತರಗತಿ ಫಲಿತಾಂಶ

**ಮೈಸೂರಿನ ಜೆ.ಪಿ. ನಗರದ ಜೆಎಸ್‌ಎಸ್ ಪಬ್ಲಿಕ್ ಶಾಲೆಗೆ** ಸಿಬಿಎಸ್‌ಇ 10ನೇ ತರಗತಿ ಪರೀಕ್ಷೆಯಲ್ಲಿ ಶೇ. 100 ಫಲಿತಾಂಶ ಲಭಿಸಿದೆ. ಪರೀಕ್ಷೆ ಬರೆದ 70 ವಿದ್ಯಾರ್ಥಿಗಳಲ್ಲಿ 41 ವಿದ್ಯಾರ್ಥಿಗಳು ಅತ್ಯುತ್ತಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. 28 ವಿದ್ಯಾರ್ಥಿಗಳು ಪ್ರಥಮ ದರ್ಜೆ, ಓರ್ವ ವಿದ್ಯಾರ್ಥಿ ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ಡಿ. ಗಗನ್ ದೀಪ್ ಶೇ 97 ಅಂಕಗಳನ್ನು ಪಡೆದು ಶಾಲೆಗೆ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಯಾಗಿದ್ದಾನೆ.


ಡಿ. ಗಗನ್ ದೀಪ್
ಶೇ.97


ಡಿ. ಹರಿಪ್ರಿಯ
ಶೇ.96.6


ಪಿ. ನಿಶ್ಚಿತ್
ಶೇ.95.8


ಎಂ.ಎ. ಶ್ರೀಗೌರಿ
ಶೇ.95


ಎಂ. ಧೀರಜ್
ಶೇ.94.8


ಸಮರ್ಥ್
ಶೇ.94


ಎಸ್. ಆದ್ಯ
ಶೇ.93.8


ಸಂಜನ ಜಗದೀಶ್
ಶೇ.93.4


ಸಂತೃಪ್ತ್ ಶಿವಣ್ಣ
ಶೇ.93.2


ಸಿಂಚನಾ ಮಠ್
ಶೇ.93


ಸೃಜನ್ ಎಂ. ಪಟೇಲ್
ಶೇ.92.8


ಎನ್. ಸಿರಿ
ಶೇ.92.2


ನಿಸರ್ಗ ಸುದೀಪ್
ಶೇ.92


ಎಂ. ನವನೀತ್
ಶೇ.91.8


ಬಿ. ಸೋಹನ್
ಶೇ.91.6


ವಿ. ಅಭಿನವ್
ಶೇ.91.4


ಎಂ. ಸುಹಾಸ್
ಶೇ.90.8


ಜೆ. ವಿನುತಾ
ಶೇ.90.6


ಎಂ. ಸಂಜನಾ
ಶೇ.90.4


ಎಸ್. ವಿಶಾಖದತ್ತ
ಶೇ.90.2

**ಮೈಸೂರಿನ ಸಿದ್ಧಾರ್ಥನಗರದ ಜೆಎಸ್‌ಎಸ್ ಪಬ್ಲಿಕ್ ಶಾಲೆಗೆ** ಸಿಬಿಎಸ್‌ಇ 10ನೇ ತರಗತಿ ಪರೀಕ್ಷೆಯಲ್ಲಿ ಶೇ. 100 ಫಲಿತಾಂಶ ಲಭಿಸಿದೆ. ಪರೀಕ್ಷೆ ಬರೆದ 33 ವಿದ್ಯಾರ್ಥಿಗಳು ಶೇ. 90 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿದ್ದಾರೆ. 67 ವಿದ್ಯಾರ್ಥಿಗಳು ಉನ್ನತ ಶ್ರೇಣಿ ಮತ್ತು 33 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಪಾಸಾಗಿದ್ದಾರೆ.



ಕೌಶಲ್ ರಾಜ್
ಶೇ.97.4



ಚರಿತಾ ಆರ್. ಅರಸ್
ಶೇ.97.2



ಸಮೀಕ್ಷಾ ಆರಾಧ್ಯಮಠ
ಶೇ.97



ಎಸ್. ರಚನಾ
ಶೇ.96.4



ಜಿ. ಅನುರಾಗ್ ಗೌಡ
ಶೇ.96.4



ಯು.ಆರ್. ಗೌತಮ್
ಶೇ.96



ಗುಂಜಾನ್ ಮೆಹ್ತಾ
ಶೇ.95.8



ಎ.ಎಸ್. ಋತು ಗೌರಿ
ಶೇ.95.6



ಎಂ.ಪಿ. ಕಿರಣ್
ಶೇ.95.4



ಎಸ್. ನಿರಂಜನ್
ಶೇ.95



ತಮನ್ನಾ
ಶೇ.95



ಅನುಪಮಾ
ಶೇ.94.8



ಅಪೇಕ್ಷಾ ಪಿ. ಚಕ್ರವರ್ತಿ
ಶೇ.94.8



ಎನ್.ಜಿ. ಧನ್ಯಕುಮಾರ್
ಶೇ.94.8



ಆರ್. ತ್ರಿಶಾ
ಶೇ.93.8



ವೈ.ಸಿ. ವಿಜೇತಾ
ಶೇ.93.8



ವಿ. ಪುಷ್ಕರ್
ಶೇ.93.8



ಎಸ್. ಕೀರ್ತಿಕಾ
ಶೇ.93



ಕೆ.ಎಸ್. ಸುಷ್ಮಾ
ಶೇ.92.8



ಅನುಜ್ ಜೆ. ಜೈನ್
ಶೇ.92.4


ತಶು ಮೆಹ್ತಾ
ಶೇ.92.4


ಧ್ರುಮಿಲ್ ಮೆಹ್ತಾ
ಶೇ.92.2


ಎಸ್. ಸೃಷ್ಟಿ
ಶೇ.92


ಕೆ. ಚಿನ್ಮಯಿ
ಶೇ.92


ವಿವಿನ್ ಫ್ರಾನ್ಸಿಸ್
91.8


ಸಿ.ಎಸ್. ಶ್ರಾವ್ಯ
ಶೇ.91.8


ರಿಷಭ್ ಬಿ. ಜೈನ್
ಶೇ.91.8


ಎಂ.ಆರ್. ವರ್ಷ
ಶೇ.91.8


ಆರ್. ಗೆಹಾನ ಕಾಮೇಶ್ವರ
ಶೇ.91.2


ತನ್ಮಯಿ ಯತೀಶ್
ಶೇ.91


ಭುವನ್ ಎಸ್. ಶೇಖರ್
ಶೇ.90.8


ಆರ್. ಹರ್ಷವರ್ಧನ್
ಶೇ.90.2


ಸನಿಹಾ ಎಸ್. ಜೈನ್
ಶೇ.90

## ಎಸ್‌ಎಸ್‌ಎಲ್‌ಸಿ ಫಲಿತಾಂಶ

**ಮೈಸೂರಿನ ಶಿವರಾತ್ರೀಶ್ವರ ನಗರ ಬನ್ನಿಮಂಟಪದ ಜೆಎಸ್‌ಎಸ್ ಪ್ರೌಢಶಾಲೆಗೆ** ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ. 73% ಫಲಿತಾಂಶ ಲಭಿಸಿದೆ. 42 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು 31 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಇದರಲ್ಲಿ ಸಂಕಮ್ಮ ಸಿದ್ದಪ್ಪ ಕರಡಿ 625 ಕ್ಕೆ 551 ಅಂಕ ಗಳಿಸಿ ಶಾಲೆಗೆ ಪ್ರಥಮ ಸ್ಥಾನ ಹಾಗೂ ಭ್ರಮರಾಂಭ 528 ಅಂಕ ಗಳಿಸಿ ದ್ವಿತೀಯ ಸ್ಥಾನ ಪಡೆದಿದ್ದಾರೆ.


ಸಂಕಮ್ಮ ಸಿದ್ದಪ್ಪ ಕರಡಿ
551


ಭ್ರಮರಾಂಭ
528

2018-19 ಸಾಲಿನ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ **ನಂಜನಗೂಡು ತಾಲ್ಲೂಕಿನ ಹುಲ್ಲಹಳ್ಳಿಯ ಜೆಎಸ್‌ಎಸ್ ಪ್ರೌಢಶಾಲೆಯ** 61 ವಿದ್ಯಾರ್ಥಿಗಳು ಮತ್ತು 38 ವಿದ್ಯಾರ್ಥಿನಿಯರು ಸೇರಿ ಒಟ್ಟು 99 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿ ಎಲ್ಲರೂ ಉತ್ತೀರ್ಣರಾಗುವ ಮೂಲಕ ಶಾಲೆಗೆ ಶೇ 100 ರಷ್ಟು ಫಲಿತಾಂಶ ದೊರೆತಿದೆ. ಶೇ. 92 ಅಂಕಗಳನ್ನು ಪಡೆಯವುದರ ಮೂಲಕ ಕು. ಎಸ್. ಪುಷ್ಪ ಎಂಬ ವಿದ್ಯಾರ್ಥಿನಿಯು ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ. 10 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ 11 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಮತ್ತು 78 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.



ಎಸ್. ಪುಷ್ಪ
ಶೇ.92



ಎಸ್.ಪಿ. ರುಚಿತ
ಶೇ.84.64



ಕೆ.ಆರ್. ಶ್ರೀಕಂಠ ಪ್ರಸಾದ್
ಶೇ.84.32



ಸಿ.ಜೆ. ರಶ್ಮಿ
ಶೇ.81.92



ಎಂ. ಗುರುಕಿರಣ್
ಶೇ.80



ಚರಣ್‌ಶೆಟ್ಟಿ
ಶೇ.74.40



ಎಸ್.ಎಂ. ಅಭಿಷೇಕ
ಶೇ.77.12



ಎಸ್.ಎಸ್. ಮದನ್
ಶೇ.77.12

**ಶ್ರೀಕ್ಷೇತ್ರದಲ್ಲಿ 2019 ರಲ್ಲಿ ಜರುಗಲಿರುವ**

**ತಿಂಗಳ ಸಾಮೂಹಿಕ ವಿವಾಹ**

**ಜುಲೈ–7, ಭಾನುವಾರ**

**ವಿವರಗಳಿಗೆ ಸಂಪರ್ಕಿಸಿ:**
**ಆಡಳಿತಾಧಿಕಾರಿಗಳು**
**ಜೆಎಸ್‌ಎಸ್ ಸಂಸ್ಥೆಗಳು, ಸುತ್ತೂರು**

**ದೂರವಾಣಿ ಸಂಖ್ಯೆ : 08221–232559, 232033, 232044**

## ENGLISH SECTION

### STUDENT ACHIVEMENTS

Ms. M. Ashwini, Research Scholar' under the guidance of Dr. K. Sumana received the Best Poster Award on the topic "Studies on Transmissible Antibiotic Resistance at Probiotic Bacteria" in the One Day National Workshop held at CSIR-CFTRI on 1.3.2019.



Ms.M. Ashwini receiving the award at CFTRI, Mysuru for the best poster presented at a national workshop.

### Conferences/ Seminars conducted
### International Day of Immunology

To mark the International Day of Immunology - 2019, The Division of Biotechnology & Bioinformatics, Department of Water & Health - Faculty of Life Sciences (DW & H - FLS), JSS Academy of Higher Education & Research (JSS AHER), Mysuru, in association with the Indian Immunological Society (IIS) and the All India Institute of Medical Sciences, New Delhi, organised a one-day programme on "Immunology and Allergic Diseases" on 29.4. 2019 at Mysuru. The opening remarks were given by the Presiding Guest of this function, Dr. (Col.) M. Dayananda, Director, JSS Hospital, Mysore, who spoke on the importance of immunology and facing the growing environmental challenges in the world. Later, special lectures were delivered by Dr. Y.P. Venkatesh, Retd. Scientist, Central Food Technological Research Institute, Mysuru who gave the key message on "Science on Allergology in Relation to Food Allergens", Dr. P.A. Mahesh, Professor & Head, TB & Respiratory Medicine, JSS Medical College & Hospital, Mysuru delivered a talk on




Winners of E-poster competitions felicitated by Dr. Y.P. Venkatesh Rtd. Scientist, CFTRI, Mysuru

"An Introduction into the Epidemiology and Immunology of Sensitization to Allergens". The undergraduate and postgraduate students of DW & H - FLS presented the E-posters on the theme "Immunology and Allergic Diseases". The E-posters were evaluated by the external judge, Dr.Y.P. Venkatesh. The programme was concluded by prize distribution to the winners, followed by concluding remarks from the Head, Dr. K.A. Raveesha.

## Faculty participation in Conferences/ Workshops/Seminars

Dr. N. Raghu participated in the race for 7" Marathon conducted by SIG group in collaboration with Organisation for Rare Diseases India



Students and faculties of FLS and JSS Medical College participated in the marathon event organized by SIG Group in collaboration with Organization for Rare Diseases India JSS Hospital and JSS AHER

(ORDI), JSS Hospital & JSS AHER on 28.2.2019 as part of "World Rare Disease Day".

Dr. M.N. Kiran Kumar attended the Allergy School on Insect Venom Allergy and Mastocytosis, held between 11th-13th April 2019 at the University Medical Center, Groningen, Netherlands.The School is run by the European Academy of Allergy and Clinical Immunology, Switzerland.

## Guest Lectures Organised

Division of Medical Statistics organized a Special Lecture by Dr.Vasudeva Guddattu, Associate Professor, Department of Statistics, Manipal Academy of Higher Education on "Sample Size Determination" on 27.3.2019

## Guest Lectures delivered

Dr. K.A. Raveesha delivered a lecture on "Qualityissues in Higher Education." at the inaugural function of the Quality Enhancement Lecture Series, organised by IQAC, University of Mysore,Mysuru on 21.3. 2019.

Dr. K.A. Raveesha , Head, DWH-FLS, delivered a special lecture on

"Scientific Validation of Indigenous Herbal Medicinal Knowledge" on 18th March 2019 at Human Resource Development Center, Karnataka University, Dharwad.

Dr. K.A. Raveesha delivered the Keynote Address at the One-Day Symposium on "Life Sciences for Future Sustainability" held on 30.3.2019 at the Government College for Women, Mandya.

## INDUSTRIAL VISITS

The Indian Institute of Science Bengaluru organized an "Open Day" event to showcase its activities to the student community and the general public on 23.3.2019. The faculties from the Division of Biotechnology & Bioinformatics, accompanied the final year B.Sc. Biotech. and I year M.Sc. Bioinformatics students. The visit to IISc was to expose students to the scientific events that take place at the campus like popular lectures, experimental demos, poster presentations, quiz contests, scientific competitions, and exhibitions that will be showcased in various Departments and Centres.

## NSS ACTIVITIES

The NSS Annual Camp was held at Majjigepura, Karnataka from 21st-30th March, 2019.



Students planting saplings on the occasion of NSS camp at Majjigepura

## EVENTS

World Forest Day was celebrated by Department of Water & Health, on 21.3.2019. On this occasion, a special awareness and education campaign on Forest Conservation and Forest Fire was held at Baragi, Gundlupet Taluk, During the programme, students created awareness and educated the villagers, speciathy children, about the importance of quality environment and role of forest in managing health environment by walkathon and active interactions. In addition, they created an impact of forest on our children and cause of anthropogenic forest fire

through street play. The President and members of Baragi Gramapanchayath, Sri Naveen, ACF and Sri C.R. Prasanna from Forest Department were associated in this programme.

Division of Environmental Sciences. Mysore organized an awareness program and walkathon at Bannimantap, Mysuru commemorate the World Water Day-2019 to sensitize the public and students on the importance of water and hygiene. Sri. U. N. Ravikumar, Former Director, CART, Mysuru delivered a special lecture on "Water for Life" where in he highlighted about water conservation and sustainable development through rain water harvesting. He also explained the existing problems and alternative routes for overcoming water related problems. During the event, Dr. P.A. Kushalappa Director Academics, JSS AHER, Dr. S. Balsubramaian Director Research, JSS AHER, Dr. K.A. Raveesha, Head, Department of Water & Health, Faculty members were present.

## Jeevam- Sports and Cultural Meet

DWH - FLS conducted the Annual Sports and Cultural Meet between 8th-13th Apr. 2019. The event was inaugurated by Dr. S. Balasubramanian, Dean, FLS. and Dr. P.A. Kushalappa, Director, Academics, on 8.3.2019. The event was followed by flash mob and Dollu Kunitha by the students. The Meet was organized on 9th-10th Apr. 2019. Students participated and won in several competitions like cricket, football, athletics, shuttle etc. Several off-stage events like rangoli, hair styling, tattooing, face painting, creative writing, canvas painting, cooking without fire, best out-of-waste etc., were organised on 11.4.2019. The day culminated with Panache. The event winners were felicitated by Sri Harsha, who gave a stellar performance on stage and entertained the students and faculties. There were several on-stage events next day like showcase your talent, solo singing, group singing, duet dance, western dance, classical and non classical dance etc.

As fire is in stone
as reflection in water
as the tree in the seed
as silence in sound,
you, *Goheshwara*, are in
your devotees
*-Allama Prabhu*

# Graduation Day Celebrated

**JSS Institute of Speech and Hearing, Mysuru** conducted its first Graduation Day on 14.5.2019 at Sri Rajendra Centenary Auditorium, JSS Hospital, Mysuru. Dr. B. Suresh, Vice-Chancellor, JSS Academy of Higher Education and Research was the Chief Guest. Dr. N. Rathna, Former Director, All India Institute of Speech and Hearing, Mysuru and Sri R. Mahesh, Director, Medical Education Division, JSS Mahavidyapeetha were the Guests of Honour. Dr. C.G. Betsurmath, Executive Secretary, JSS Mahavidyapeetha, Mysuru presided over the function. The Director of JSS Hospital, Mysuru along with Heads of various Departments, parents of the outgoing students, staff and students, of the Institute attended the programme.

The function began with the invocation by students of the Institute. The welcome speech was delivered by Dr. N.P.Nataraja and the annual Report was presented by Dr. R. Suma The Graduation Oath was given by Dr. N.P. Nataraja. Dr. B. Suresh and Dr. C.G. Besurmath awarded diplomas to one Ph.D, ten Master's and seventyfour Bachelor's degree Students, Dr. C.G. Betsurmath gave away the Jagadguru Dr. Shivarathri Rajendra Swamiji award. As well Ms. Anita T. Mani, Ms. Sowmya Hansoge, Ms. Monica Ratnamala and Ms. S. Neha received the awards asbest clinicians. The Best Outgoing Student Award was given to Ms. Sruthi K. Vinod. Ms. Bharani, Ms. Ranjini Durai and Ms. D. Nagashreya received the awards for highest marks secured. in various subjects. The awards for highest marks in Audiology were given to Ms, SangkariKaruppaiahGanesan and Ms. Minnu Maria George. Mr. Rakesh T. Kumar and Ms. Chitkala Sharma were given awards for highest marks secured in Speech Language Pathology subjects. Later, the outgoing graduates shared their experiences at the Institution.The college magazine titled 'Speak and Hear' was released by Dr. N. Ratna.

In his address, Dr. B. Suresh stressed upon the responsibilities of the professionals in the society as 15% of the population suffer from various




types of speech and hearing disabilities. He motivated the students to take up research on Sign Language in Indian context, to meet the requirements across the country. He expressed his happiness on the increase in female professionals in the healthcare sector.

Dr. N. Ratna recalled the initial days of the Institute and congratulated the staff on its growth and outreach programmes. He appreciated the performance of the Institute in academics, research and extra-curricular activities. He congratulated staff and students on winning four out of seven awards at ISHACON-2019, and, aslo the Overall Championships at various inter college cultural fest. He greeted the graduates and reminded them about the ethics and honesty that should be followed in the field. He advised them to do their best for the individuals with communication problems. He also highlighted on the importance of evidence- based practice and research in the field.

Sri R. Mahesh congratulated the parents and graduates for optive for this profession. He stressed on the importance of creating awareness and providing service to the underprivileged section of the country. He also emphasized on the importance of research in the field to bring innovations in rehabilitation.

Dr. C.G. Betsurmath, in his presidential address, mentioned that education is the only way to empower

the society. An increase in awareness about the field will improve the outreach of the clinical services and will also improve the number of professionals in the field, he said. He concluded his speach by encouraging the graduates to take up new challenges in the digital era. At the end, there was vote of thanks and national anthem. □



ಮೈಸೂರಿನ ಹೆಬ್ಬಾಳು ಕೈಗಾರಿಕಾ ವಲಯದಲ್ಲಿರುವ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಏರ್ಪಡಿಸಿದ್ದ ಸಿಲ್ಕ್ ಉತ್ಸವ - 2019 ವಸ್ತುಪ್ರದರ್ಶನ ಕಾರ್ಯಕ್ರಮವನ್ನು ಡಾ. ಸಿ.ಜಿ. ಬೆಟಸೂರಮಠರವರು ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಶ್ರೀ ಶಿವನಂಜಸ್ವಾಮಿ, ಶ್ರೀ ಆರ್.ಎಸ್. ಪೂರ್ಣಾನಂದ, ಪ್ರೊ. ಮೊರಬದ ಮಲ್ಲಿಕಾರ್ಜುನ, ಶ್ರೀ ಶಂಕರಪ್ಪ, ಶ್ರೀ ಬಿ.ಆರ್. ಉಮಾಕಾಂತ್‌ರವರು

If the dyke drinks the water
if the fence devours the crop
if the mistress steals in her own house.....
if You get angry
can I bear it?
Tell me, Lord!

- Akka Mahadevi

If the hill feels cold
what shall I cover it with?
if the void is naked
what shall I clothe it with?
if the devotee becomes an infidel
What comparison can I give,
Goheshwara?

- Allama prabhu




ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ನಡೆದ ಆಸ್ಪತ್ರೆಗಳು ಮತ್ತು ಆರೋಗ್ಯ ಸಂರಕ್ಷಣಾ ವ್ಯವಸ್ಥೆಯಲ್ಲಿ ಕೈ ನೈರ್ಮಲ್ಯದ ಪ್ರಾಮುಖ್ಯತೆ ಕುರಿತ ಅರಿವು ಕಾರ್ಯಕ್ರಮ



ಮೈಸೂರಿನ ಬಿ.ಎನ್.ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ ಹಿರಿಯ ವಿದ್ಯಾರ್ಥಿಗಳ ಸಮಾವೇಶ ಮತ್ತು ಪೋಷಕರ ಸಭೆಯನ್ನು ಶ್ರೀ ಅಡಗೂರು ಎಚ್. ವಿಶ್ವನಾಥ್‌ರವರು ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಪ್ರೊ. ಬಿ.ವಿ. ಸಾಂಬಶಿವಯ್ಯ, ಪ್ರೊ. ಎಂ. ಮಹದೇವಪ್ಪ, ಪ್ರೊ. ಡಿ.ಎಸ್. ಸದಾಶಿವಮೂರ್ತಿ ಅವರೊಂದಿಗೆ ಹಿರಿಯ ವಿದ್ಯಾರ್ಥಿಗಳು ಮತ್ತು ಪೋಷಕರಿದ್ದಾರೆ




ಮೈಸೂರಿನ ಜೆಎಸ್‌ಎಸ್ ಫಿಸಿಯೋಥೆರಪಿ ಕಾಲೇಜಿನ ವಿದ್ಯಾರ್ಥಿಗಳು ಮಂಗಳೂರಿನಲ್ಲಿ ನಡೆದ ಫಿಸಿಯೋಥೆರಪಿ ಕಾಲೇಜುಗಳ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗವಹಿಸಿ ಪ್ರಥಮ ಬಹುಮಾನ ಪಡೆದ ಸಂದರ್ಭದಲ್ಲಿ ವಿದ್ಯಾರ್ಥಿಗಳೊಂದಿಗೆ ಪ್ರಾಂಶುಪಾಲರು ಮತ್ತು ಸಿಬ್ಬಂದಿವರ್ಗದವರು

**Registered with the Registrar of Newspapers for India No. KARBIL/2014/66470**
**'JSS Varthapathra' Monthly, Vol. 4, Issue No. 18 June 2019**



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ರಾಜೇಂದ್ರ ಶತಮಾನೋತ್ಸವ ಭವನದಲ್ಲಿ ಆಯೋಜಿಸಿದ್ದ ವಿಶ್ವ ಶುಶ್ರೂಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಜೆಎಸ್‌ಎಸ್ ನರ್ಸಿಂಗ್ ಕಾಲೇಜು ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಲಾಯಿತು. ಚಿತ್ರದಲ್ಲಿ ಪ್ರೊ. ಶೀಲಾ ವಿಲಿಯಮ್ಸ್, ಶ್ರೀ ಜೆನೆಟ್ ಮಥಾಯಿಸ್, ಡಾ. ಎಂ. ದಯಾನಂದ, ಶ್ರೀ ಆರ್. ಮಹೇಶ್ ಮೊದಲಾದವರಿದ್ದಾರೆ



ಮೈಸೂರಿನ ಜೆಎಸ್‌ಎಸ್ ವಿಜ್ಞಾನ ತಂತ್ರಜ್ಞಾನ ವಿಶ್ವವಿದ್ಯಾಲಯವು ಟಿಸಿಎಸ್ ಸಂಸ್ಥೆಯೊಂದಿಗೆ ಮಾಡಿಕೊಂಡ ಒಡಂಬಡಿಕೆ ಸಂದರ್ಭದಲ್ಲಿ ಡಾ. ಬಿ.ಜಿ. ಸಂಗಮೇಶ್ವರ್, ಶ್ರೀ ಚಂದ್ರ ಕೊಡೂರು ಅವರೊಂದಿಗೆ ಇತರರಿದ್ದಾರೆ



ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಜರುಗಿದ ಬೆಳದಿಂಗಳ ಸಂಗೀತ-212 ಕಾರ್ಯಕ್ರಮದಲ್ಲಿ ವಿದ್ವಾನ್ ಮೈಸೂರು ಎ. ಚಂದನ್ ಕುಮಾರ್ (ಕೊಳಲು) ವಿದ್ವಾನ್ ಎಚ್.ಎಸ್. ಸುಧೀಂದ್ರ, ವಿದ್ವಾನ್ ಕೆ.ಯು. ಜಯಚಂದ್ರರಾವ್ (ಮೃದಂಗ) ಮತ್ತು ಮಾಸ್ಟರ್ ಋಷಿಕೇಶ್ (ತಂಬೂರಿ) ಅವರುಗಳು

ಸಂಪಾದಕ: **ಡಾ. ಬಿ. ಪ್ರಭುಸ್ವಾಮಿ ಕಟ್ಟಿವಾಡಿ** ನೆರವು: **ಆರ್.ಎಸ್. ಪೂರ್ಣಾನಂದ** ಸಹ ಸಂಪಾದಕ: **ಮ.ಗು. ಬಸವಣ್ಣ**
ಪ್ರಕಾಶಕರು: ಜೆಎಸ್‌ಎಸ್ ಮಹಾವಿದ್ಯಾಪೀಠ, ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004
ದೂರವಾಣಿ: 0821-2548212 Extn. 223 * e-mail: jssmasapatrike@gmail.com * website: www.jssonline.org
ಮುದ್ರಣ: ಜೆಎಸ್‌ಎಸ್ ಪ್ರಿಂಟಿಂಗ್ ಪ್ರೆಸ್, ಮೈಸೂರು **ಬಿಡಿ ಪ್ರತಿ 10 ರೂ.**